ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 40
೩ ಆಗಸ್ಟ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

ಕೇರಳ ಸರ್ಕಾರ ಬಲಪ್ರಯೋಗ ಕೈಕೊಳ್ಳುವಂತೆ ಪ್ರತಿಪಕ್ಷಗಳ ಸಂಚು—ಹಿಂಸಾನೀತಿ!

ಅಂತರ್‌ಯುದ್ಧದ ತುರ್ತು ಪರಿಸ್ಥಿತಿಯೆಂಬುದು ಶುದ್ಧ ಕುಹಕ

ಕೇರಳದಲ್ಲಿ ಗಂಭೀರವಾದ "ತುರ್ತಿನ ಪರಿಸ್ಥಿತಿ" ಉಂಟಾಗಿದೆ ಎಂದು ಅಲ್ಲಿನ ಪ್ರತಿಪಕ್ಷಗಳ ನಾಯಕರು—ಮುಖ್ಯವಾಗಿ ಕಾಂಗ್ರೆಸ್ ಮುಖಂಡರು—ಕೂಗೆಬ್ಬಿಸಿದ್ದಾರೆ. ಕಮ್ಯೂನಿಸ್ಟರು ಅಂತಯುರ್ದ್ಧ ಆರಂಭಿಸಿದ್ದಾರೆಂದೂ ಕಮ್ಯೂನಿಸ್ಟರಲ್ಲದವರ ಪ್ರಾಣಗಳಿಗೂ ಆಸ್ತಿಗಳಿಗೂ ಗಂಡಾಂತರವುಂಟಾಗಿದೆಯೆಂದೂ ಅವರು ಬೊಬ್ಬಿಡುತ್ತಿದ್ದಾರೆ. ಡಿಲ್ಲಿಗೆ ಧಾವಿಸಿ, ಕಮ್ಯೂನಿಸ್ಟ್ ಸರಕಾರವನ್ನು ಕಿತ್ತುಹಾಕಿ ಅಧ್ಯಕ್ಷರ ಆಡಳಿತೆಯನ್ನು ಸ್ಥಾಪಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದಾರೆ.

ಕೇಂದ್ರ ಕೈಹಾಕಲು ಕಾರಣವಿಲ್ಲ—ನೆಹರೂ

ಚುನಾಯಿತ ಸರಕಾರವನ್ನು ಕಿತ್ತುಹಾಕಿ, ಅಧ್ಯಕ್ಷರ ಆಳ್ವಿಕೆಯನ್ನು ಸ್ಥಾಪಿಸಲು ಕೇಂದ್ರ ಸರಕಾರವನ್ನು ಒತ್ತಾಯ ಮಾಡುವ ಈ ನಾಯಕರಿಗೆ ಪ್ರಧಾನಿ ನೆಹರೂರವರು ಸ್ಪಷ್ಟವಾದ ಮತ್ತು ಖಚಿತವಾದ ಉತ್ತರ ಕೊಟ್ಟಿದ್ದಾರೆ. ಕಲ್ಕತ್ತದಲ್ಲಿ ಒಂದು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ನೆಹರೂರವರು ಹೇಳಿದರು:

"ಕೇರಳದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಇತರ ಗುಂಪುಗಳ ಮತ್ತು ಪಕ್ಷಗಳ ವಿರುದ್ಧ ಕೆಲತರದ ಬಲಾತ್ಕಾರ ಕ್ರಮಗಳನ್ನು ಅನುಸರಿಸುತ್ತಿದೆಯೆಂಬ ದೂರುಗಳು ಬಂದಿವೆ. ಇತರ ಗುಂಪುಗಳೂ ಪಕ್ಷಗಳೂ ಅದೇ ತರದ ಕ್ರಮಗಳನ್ನು ಅನುಸರಿಸುವುದಾಗಿ ಕಮ್ಯೂನಿಸ್ಟ್ ಪಾರ್ಟಿಯಿಂದಲೂ ದೂರುಗಳು ಬಂದಿವೆ ಆದರೆ ಕೇರಳವು ಒಂದು ಸ್ವಪ್ನ ಪಿಶಾಚಿಯಲ್ಲ ಅಥವ ಅಲ್ಲಿ ಅಂತಯುರ್ದ್ಧದ ಪರಿಸ್ಥಿತಿಯೇನೂ ಉಂಟಾಗಿರುವುದಿಲ್ಲ. ಎರಡು ಪಕ್ಷಗಳೊಳಗಿನ ಸಣ್ಣ ಪುಟ್ಟ ಘರ್ಷಣೆಗಳನ್ನು ಅಂತಯುರ್ದ್ಧವೆಂದು ಕರೆಯಲು ಸಾಧ್ಯವಿಲ್ಲ........ಕೇರಳದ ಜನರು ಭಾರತದಲ್ಲೇ ಅತ್ಯಂತ ಶಾಂತ ಮನೋಭಾವವುಳ್ಳವರು. ಅಲ್ಲಿನ ಜನರು ಒಬ್ಬರೊಬ್ಬರ ತಲೆ ಒಡೆಯುವುದಿಲ್ಲ. ಆದುದರಿಂದ ಜನರು ಹಿಂಸೆಗೆ ತೊಡಗಿದರೆ ಅತ್ಯಂತ ದುರ್ದೈವೇ ಸರಿ." ಕೇರಳದಲ್ಲಿ ಕೇಂದ್ರ ಸರಕಾರ ಕೈಹಾಕಿ ಅಧ್ಯಕ್ಷರ ಆಳ್ವಿಕೆ ಸ್ಥಾಪಿಸುವ ಪ್ರಮೇಯ ಉದ್ಭವಿಸಿಲ್ಲವೆಂದು ನೆಹರೂರವರು ಸ್ಪಷ್ಟ ಪಡಿಸಿದರು.

ಇದೇನೂ ಹೊಸತಲ್ಲ

ಕೇರಳದಲ್ಲಿ ಪ್ರತಿಪಕ್ಷಗಳು — ಮುಖ್ಯವಾಗಿ ಕಾಂಗ್ರೆಸು — ಮೊದಲಿನಿಂದಲೂ ಇದೊಂದೇ ಗುರಿಯನ್ನು ಇಟ್ಟುಕೊಂಡು ವರ್ತಿಸುತ್ತಿವೆ. ಕಮ್ಯೂನಿಸ್ಟ್ ಸರಕಾರ ಅಧಿಕಾರ ವಹಿಸಿದ ಮರುಕ್ಷಣದಿಂದಲೆ "ಕಾಯಿದೆ ಮತ್ತು ನೆಮ್ಮದಿ" ಮುರಿದುಬಿದ್ದಿವೆಯೆಂಬ ಕೂಗನ್ನು ಅವರು ಎಬ್ಬಿಸಿದರು. ಐಕ್ಯ ಕೇರಳದ ಮೊತ್ತ ಮೊದಲನೆಯ ಚುನಾಯಿತ ಸರಕಾರ ಅಧಿಕಾರ ವಹಿಸಿಕೊಂಡ ದಿನ ಕೆಲವು ಕೈದಿಗಳನ್ನು ಬಿಡುಗಡೆ ಮಾಡಿದ್ದರಿಂದ ಅರಾಜಕತೆ ಉಂಟಾಗಿದೆಯೆಂದೂ ಕೇಂದ್ರ ಕೈ ಹಾಕಬೇಕೆಂದೂ ಕೆಲವು ದಿನ ಬೊಬ್ಬಿಟ್ಟರು ಆದು ಫಲಿಸಲಿಲ್ಲ. ಯಾಕೆಂದರೆ, ಅದರಲ್ಲಿ ವಾಸ್ತವಾಂಶ ಇರಲಿಲ್ಲ. ಅನಂತರ ಕೇರಳ ಸರಕಾರವು ಪೋಲೀಸು ಖಾತೆಯ ಪಾತ್ರದ ಬಗೆಗೆ ಹೊಸ ಧೋರಣೆಯನ್ನು ಘೋಷಿಸಿದಾಗ, "ಕಾಯಿದೆ ಮತ್ತು ನೆಮ್ಮದಿಗೆ ಅಪಾಯ" ಎಂಬ ಕೂಗು ಮತ್ತೊಮ್ಮೆ ಬಿರುಸಾಯಿತು. ಉದ್ಯೋಗಿಕ ಮತ್ತು ವ್ಯವಸಾಯಿಕ ವಿವಾದಗಳಲ್ಲಿ, ಜನಸಾಮಾನ್ಯರ ಚಳುವಳಿಗಳಲ್ಲಿ, ಪ್ರತಿಪಕ್ಷಗಳು ಸರಕಾರಕ್ಕೆ ವಿರೋಧವಾಗಿ ನಿಯಮಬದ್ಧವಾಗಿ ನಡೆಸುವ ಚಳುವಳಿಗಳಲ್ಲಿ ಕೂಡ, ಪೋಲೀಸು ಖಾತೆ ಪ್ರವೇಶಿಸಕೂಡದು; ದೌರ್ಜನ್ಯ ನಡೆಸಬಾರದು ಎಂದು ಸರಕಾರ ಘೋಷಿಸಿದ್ದನ್ನು ಈ ನಾಯಕರು ಪೂರ್ತಾ ದುರುಪಯೋಗ ಮಾಡಿಕೊಂಡರು. ಗಲಭೆಗಳನ್ನೆಬ್ಬಿಸಿದರು. ಕಾಲ್ಪನಿಕ ಕೇಳಿಕೆಗಳ ಆಧಾರದಲ್ಲಿ "ಹೋರಾಟ"ಗಳನ್ನು

(ಕೊನೇ ಪುಟ ನೋಡಿ)

ರಾಜೀನಾಮೆ ಅನಗತ್ಯ

ಹಿರಿಯ ರಾಜಕಾರಣಿ ಕೇಳಪ್ಪನ್‌ರ ಅಭಿಪ್ರಾಯ

"ಪೋಲೀಸ್ ಗೋಲೀಬಾರ್ ಕಾರಣದಿಂದ ಕೇರಳ ಸರಕಾರವು ರಾಜೀನಾಮೆ ಕೊಡಬೇಕಾದ ಪ್ರಮೇಯವೇ ಇಲ್ಲ" ಎಂಬುದಾಗಿ ಕೇರಳದ ಭೂದಾನದ ಧುರೀಣರಾದ ಶ್ರೀ ಕೇಳಪ್ಪನ್‌ರವರು ಸ್ಪಷ್ಟಪಡಿಸಿದ್ದಾರೆ.

"ಕಾಂಗ್ರೆಸ್ ಸರ್ಕಾರದಲ್ಲೇನು ಗೋಲೀಬಾರ್ ವಿರಳವಾಗಿರಲಿಲ್ಲ, ಯಾವ ಸರಕಾರವೂ ಸುವ್ಯವಸ್ಥೆ ನೆಮ್ಮದಿಗಳ ಹೆಸರಿನಲ್ಲಿ ಈ ಕ್ರಮವನ್ನು ಕೈಕೊಳ್ಳಬೇಕಾಗುತ್ತದೆ ಮತ್ತು ಅದೇನು ಸಂಪೂರ್ಣ ತಪ್ಪಲ್ಲ." ಎಂದೂ ಅವರು ಹೇಳಿದ್ದಾರೆ.

"ಪಟ್ಟಂಥಾನು ಪಿಳ್ಳೆ ಮಂತ್ರಿಮಂಡಳ ಕೂಡ ಗೋಲೀಬಾರ್ ನಡೆಸಿತು. ಆ ಕಾರಣದಿಂದ ಥಾನು ಪಿಳ್ಳೆ ಸರಕಾರ ರಾಜೀನಾಮೆ ಕೊಡಬೇಕೆಂದು ಡಾ|| ಲೋಹಿಯಾ ಕೇಳಿದರು. ಆದರೆ ವೈಯುಕ್ತಿಕವಾಗಿ ನಾನು ವಿರೋಧಿಸಿದ್ದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾದುಕೊಳ್ಳಲಿಕ್ಕಾಗದಿದ್ದರೆ, ಸ್ಥಾಪಿಸಲಿಕ್ಕಾಗದಿದ್ದರೆ ಸರ್ಕಾರ ರಾಜೀನಾಮೆ ಕೊಡಲೇಬೇಕೆ ವಿನಃ ಆಕಸ್ಮಿಕ ಗೋಲೀಬಾರ್ ಕಾರಣದಿಂದಲ್ಲ. ಕೆಲವು ನೂರು ಜನ ಪರಿಸ್ಥಿತಿಯನ್ನು ಅತ್ಯಂತ ಕಠಿಣಗೊಳಿಸಿದಾಗ ಯಾವ ಸರ್ಕಾರವೂ ಗೋಲೀಬಾರ್ ನಡೆಸಲೇ ಬೇಕಾದೀತು—ಬಲವಂತದಿಂದಾದರೂ. ಸಾರ್ವಜನಿಕ ಆಸ್ತಿಪಾಸ್ತಿಗೆ ಧಕ್ಕೆಯೊದಗಿ ವಿಧ್ವಂಸ ನಡೆದಿದ್ದರೆ ಸರ್ಕಾರ ಅದನ್ನು ಬಲಪ್ರಯೋಗದಿಂದಾದರೂ ತಪ್ಪಿಸಿ ರಕ್ಷಿಸುವದರಲ್ಲಿ ತಪ್ಪೇನಿಲ್ಲ".

ಎಂದೂ ಶ್ರೀ ಕೇಳಪ್ಪನ್ ಹೇಳಿದ್ದಾರೆ

ಇದು, ಇದು...

ಕೇರಳ ಸರಕಾರವನ್ನು ಉರುಳಿಸುವ ಕೊನೆಯ ಆಯುಧವಾಗಿ ಎಳೇ ಮಕ್ಕಳನ್ನು ಉಪಯೋಗಿಸುವ, ಸಾರ್ವಜನಿಕ ಸೊತ್ತುಗಳನ್ನು ನಾಶಮಾಡುವ, ಪೋಲೀಸರ ಮೇಲೆ ಧಾಳಿ ನಡೆಸುವ ಕಛೇರಿಗಳ ಕೆಲಸಕ್ಕೆ ಆತಂಕ ಮಾಡುವುದೇ ಮೊದಲಾದ ಕಾಂಗ್ರೆಸ್ ಮತ್ತಿತರ ಪ್ರತಿಪಕ್ಷಗಳ ವರ್ತನೆಗಳನ್ನು ಖಂಡಿಸಲು ಕಣ್ಣಾನೂರಿನಲ್ಲಿ ತಾ. ೨೭ರಂದು ಪ್ರಚಂಡ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ಜರಗಿತು.

"ರಾಜಕೀಯ ಲಾಭಕ್ಕೆ ವಿದ್ಯಾರ್ಥಿಗಳನ್ನು ಬಲಿ ಕೊಡಬೇಡಿ!"

"ಅಕ್ರಮಗಳನ್ನು ಕೈಕಟ್ಟಿ ನಿಂತು ನೋಡಲೇ? ಪ್ರತಿಪಕ್ಷಗಳೇ!"

"ಬಲಾತ್ಕಾರದಿಂದ ಸರಕಾರ ಉರುಳಿಸುವ ಯತ್ನ ಬಿಟ್ಟುಬಿಡಿ!"

ಈ ಘೋಷಣೆಗಳು ಮೆರವಣಿಗೆಯಲ್ಲಿ ಮೊಳಗಿದವು.

o o o

ತಾ|| ೨೫ರಂದು ಕಣ್ಣಾನೂರು ಕಲೆಕ್ಟರ ಕಛೇರಿ ಮುಂದೆ ವಿದ್ಯಾರ್ಥಿಗಳೆಂಬವರ ಪಿಕೆಟಿಂಗ್ ನಡೆಯಿತು. ಅವರ ದಸ್ತಗಿರಿಯಾದ ಮರುಕ್ಷಣದಲ್ಲೇ ಅದನ್ನು ಖಂಡಿಸುವ ಕರಪತ್ರಗಳು ಹಂಚಲ್ಪಟ್ಟವು. ತಾ. ೨೫ರಂದು ದಸ್ತಗಿರಿ ಆಗಿರುವವರ ಹೆಸರುಗಳ ಸಮೇತವಾದ ಈ ಖಂಡನಾ ಕರಪತ್ರ ತಾ||. ೨೪ರಂದೇ ಮುದ್ರಿಸಲ್ಪಟ್ಟಿತ್ತು!

o o o

ವಿದ್ಯಾರ್ಥಿ ರಂಗದಲ್ಲಿ ಶಾಂತತೆಯನ್ನು ಕಾಪಾಡಲು, ವಿದ್ಯಾರ್ಥಿಗಳಿಗೆ ನಿರ್ಭಯವಾಗಿ ವಿದ್ಯಾಭ್ಯಾಸ ನಡೆಸುವ ಅವಕಾಶ ಸೃಷ್ಟಿಸಲು, ರಾಜ್ಯದಲ್ಲಿ ನೆಮ್ಮದಿ ಸ್ಥಾಪಿಸಲು ಎಲ್ಲಾ ರಾಜಕೀಯ ಪಕ್ಷಗಳೂ ಸಹಕರಿಸಬೇಕೆಂದು ಕೇರಳ ವಿದ್ಯಾರ್ಥಿ ಪೆಡರೇಷನ್ ಕಾರ್ಯದರ್ಶಿ ಶ್ರೀ ಸಿ. ಕೆ. ಚಂದ್ರಪ್ಪನ್ ವಿನಂತಿಸಿದ್ದಾರೆ.

o o o

ತ್ರಿಕರ್‌ಪುರದ ಸರಕಾರೀ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ವಿದ್ಯಾರ್ಥಿ ಸಮರದ ನಾಯಕತ್ವ ವಹಿಸಿಕೊಂಡು ಶಾಲೆಗೆ ಬೀಗ ಹಾಕಿದರು. ವಿದ್ಯಾರ್ಥಿಗಳೂ ಹೆತ್ತವರೂ ಊರಿನ ನಾಗರಿಕರೂ ಅದನ್ನು ವಿರೋಧಿಸಿ, ಮುಖ್ಯೋಪಾಧ್ಯಾಯರ ವರ್ತನೆಯನ್ನು ಖಂಡಿಸಿದರು. ಮುಖ್ಯೋಪಾಧ್ಯಾಯರು ಶಾಲೆಯ ಬೀಗ ತೆಗೆದು ಮಕ್ಕಳನ್ನು ಒಳಗೆ ಬಿಟ್ಟರಲ್ಲದೆ, ತನ್ನ ವರ್ತನೆಯ ಬಗ್ಗೆ ಜನರ ಕ್ಷಮಾಪಣೆ ಕೇಳಿದರು.

o o o

ವಿದ್ಯಾರ್ಥಿಗಳನ್ನು ಪಕ್ಷಗಳ ರಾಜಕೀಯ ಘರ್ಷಣೆಯಲ್ಲಿ ಉಪಕರಣಗಳಾಗಿ ಉಪಯೋಗಿಸುವುದನ್ನು ಪೆರಿಂತಲ್‌ಮಣ್ಣ ಅಧ್ಯಾಪಕರ ಸಂಘವು ಖಂಡಿಸಿದೆ.

o o o

"ಕೃಷ್ಣಯ್ಯರ್ ತಿರುಗಿ ಬರುವ ಮೊದಲು ಕೇರಳವನ್ನು ಎರಡರಲ್ಲೊಂದು ಮಾಡಿಬಿಡಬೇಕು" ಎಂದು ವಿದ್ಯಾರ್ಥಿ 'ಕ್ರಿಯಾ ಸಮಿತಿ'ಯ ನಾಯಕರು ಪಣ ತೊಟ್ಟಿರುವುದಾಗಿ ಪತ್ರಿಕೆಗಳಲ್ಲಿ ವಾರ್ತೆಯಿದೆ!

o o o

ಎರ್ನಾಕುಲಂನ ೪೨ ವಕೀಲರುಗಳು ಒಂದು ಜಂಟಿ ಹೇಳಿಕೆ ಹೊರಡಿಸಿ, "ವಿದ್ಯಾರ್ಥಿಗಳನ್ನು ರಾಜಕೀಯ ಹೋರಾಟಗಳಲ್ಲಿ ಆಯುಧಗಳನ್ನಾಗಿ ಉಪಯೋಗಿಸುವುದು ಖಂಡನೀಯ. ನಾಳೆಯ ಜನಾಂಗದ ಕುರಿತು ಸದ್ಭಾವನೆಯುಳ್ಳವರು ಯಾರೂ ಈ ಕೆಟ್ಟ ಕೆಲಸ ಮಾಡಬಾರದು" ಎಂದು ಹೇಳಿದ್ದಾರೆ.

ಸಂಪಾದಕೀಯ

ಶೃಂಗ ಸಮ್ಮೇಳನ ಶೀಘ್ರವಾಗಿ ಸೇರಲಿ

★ ಆಂಗ್ಲ-ಅಮೇರಿಕ ಸೇನೆಗಳು ಲೆಬನಾನ್ ಜೋರ್ಡಾನ್‌ನಿಂದ ಕೂಡಲೇ ವಾಪಸಾಗಲಿ

ಲೆಬನಾನ್ ಮತ್ತು ಜೋರ್ಡಾನುಗಳಲ್ಲಿ ಅಮೇರಿಕ ಮತ್ತು ಬ್ರಿಟಿಷ್ ಸೇನಾಪಡೆಗಳು ಬಂದಿಳಿದಿರುವುದು ವಿಶ್ವವನ್ನು ಮಹಾಯುದ್ಧದ ಭೀತಿಯಲ್ಲಿ ಮುಳುಗಿಸಿದೆ. ವಿಶ್ವಸಂಸ್ಥೆಯ ವೀಕ್ಷಕರು ಲೆಬನಾನ್‌ನಲ್ಲಿರುವಾಗಲೇ, ಪ್ರಶ್ನೆಯು ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಮುಂದಿರುವಾಗಲೇ ಅಮೇರಿಕ ಮತ್ತು ಬ್ರಿಟನ್‌ಗಳು ತಮ್ಮ ಸೇನೆಗಳನ್ನು ಲೆಬನಾನ್, ಜೋರ್ಡಾನ್‌ಗಳಿಗೆ ತಂದು ವಿಶ್ವಸಂಸ್ಥೆಯ ಪ್ರಣಾಳಿಕೆಯನ್ನೇ ಉಲ್ಲಂಘಿಸಿದೆ. ಸಾಮ್ರಾಜ್ಯಶಾಹಿಗಳ ಈ ಕೃತ್ಯವನ್ನು ಇಡೀ ವಿಶ್ವದ ಜನತೆ ತೀವ್ರವಾಗಿ ಖಂಡಿಸಿದೆ.

ದಿನೇದಿನೇ ಬೆಳೆಯುತ್ತಿರುವ ಅರಬ್ ರಾಷ್ಟ್ರೀಯತೆಯನ್ನು ತುಳಿದು ಪಶ್ಚಿಮ ಏಷ್ಯವನ್ನು ತಮ್ಮ ಯುದ್ಧನೆಲೆಯನ್ನಾಗಿಸುವುದು ಸಾಮ್ರಾಜ್ಯಶಾಹಿಗಳ ಕುತಂತ್ರವಾಗಿದೆ. ಇರಾಕ್‌ನಲ್ಲಿ ನಡೆದ ರಾಜ್ಯಕ್ರಾಂತಿಯು ಪಶ್ಚಿಮ ಏಷ್ಯಾದಲ್ಲಿ ಆಂಗ್ಲೋ ಅಮೇರಿಕನ್ ಸಾಮ್ರಾಜ್ಯವಾದಿಗಳ ಹಂಚಿಕೆಗೆ ಕೊಡಲಿ ಪೆಟ್ಟು ಇತ್ತಿತು. ಕುಖ್ಯಾತವಾದ ಬಾಗದಾದ್ ಮಿಲಿಟರಿ ಕೂಟ ಮುರಿದುಬಿತ್ತು. ಐಸನ್‌ಹೋವರರ ಮಧ್ಯಪ್ರಾಚ್ಯ ಸೂತ್ರ ಅವಸಾನಕ್ಕೀಡಾಯಿತು. ತಮ್ಮ ಯುದ್ಧಕೋರ ನೀತಿಗೆ ಪರಾಭವವಾದ್ದರಿಂದ ಸಾಮ್ರಾಜ್ಯವಾದಿಗಳು ಇಂದು ಆತ್ಮ ಹತ್ಯಾಕಾರಿ ನೀತಿಯನ್ನನುಸರಿಸಿ ಇಡೀ ವಿಶ್ವವನ್ನೇ ಯುದ್ಧದ ಭೀತಿಯಲ್ಲಿ ಮುಳುಗಿಸಿದೆ.

ಲೆಬನಾನ್ ಮತ್ತು ಜೋರ್ಡಾನ್ ಸರಕಾರಗಳ ಆಹ್ವಾನದ ಮೇಲೆ ತಾವು ರಕ್ಷಣೆಗಾಗಿ ಸೇನೆಯನ್ನು ರವಾನಿಸಿರುವುದೇ ಹೊರತು ಆಕ್ರಮಣಕಾರಿ ಉದ್ದಿಶ್ಯವಲ್ಲ ಎಂದು ಸಾಮ್ರಾಜ್ಯವಾದಿಗಳು ಹೇಳಿಕೊಳ್ಳುತ್ತಿದ್ದಾರೆ. ಇರಾಕಿನಲ್ಲಿ ಕ್ರಾಂತಿಯಾದ ಕೂಡಲೇ ಸೇನೆಗಳನ್ನು ರವಾನಿಸಿದ್ದರ ಹಿಂದಿರುವ ಹಂಚಿಕೆಯನ್ನು ವಿಶ್ವದ ಜನತೆ ಅರಿತಿದೆ. ಅರಬ್ ರಾಷ್ಟ್ರೀಯತೆಯನ್ನು ತುಳಿಯಲು ಹಳೆಯ ವಸಾಹತು ನೀತಿಯಿಂದ ಸಾಧ್ಯವಿಲ್ಲವಾಗಿದೆ. ಅರಬ್ ಜನತೆ ಇಂದು ಎಚ್ಚತ್ತಿದೆ.

ಸಾಮ್ರಾಜ್ಯಶಾಹಿಗಳ ಆಕ್ರಮಣಕಾರೀ ಕೃತ್ಯದಿಂದ ಉತ್ಕಟವಾದ ಪರಿಸ್ಥಿತಿ ಉದ್ಭವಿಸಿರುವಾಗ ಸೋವಿಯತ್ ಯೂನಿಯನ್ ಸಮಯೋಚಿತವಾದ ಸಲಹೆಗಳನ್ನಿತ್ತಿದೆ. ಅದಷ್ಟು ಜಾಗ್ರತೆಯಾಗಿ ಪಶ್ಚಿಮ ಏಷ್ಯದ ಪರಿಸ್ಥಿತಿಯನ್ನು ಪರಿಶೀಲಿಸಿ ಪರಿಹಾರ ಮಾರ್ಗ ಕಂಡುಹಿಡಿಯಲು ಶೃಂಗ ಸಮ್ಮೇಳನ ನಡೆಯಬೇಕೆಂದು ಸೂಚಿಸಿದೆ. ಅಮೇರಿಕ, ಬ್ರಿಟನ್, ರಷ್ಯ ಮತ್ತು ಫ್ರಾನ್ಸ್‌ಗಳೊಂದಿಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳೂ ಮತ್ತು ಭಾರತವೂ ಭಾಗವಹಿಸಬೇಕೆಂದು ಸೂಚಿಸಿದೆ. ಇಡೀ ವಿಶ್ವವು ಈ ಸಲಹೆಯನ್ನು ಸ್ವಾಗತಿಸಿದೆ. ಅಮೇರಿಕ ಬ್ರಿಟನ್‌ಗಳು ಒಮ್ಮೆಗೇ ಈ ಸಲಹೆಯನ್ನು ತಿರಸ್ಕರಿಸುವುದು ಕಷ್ಟವಾದ್ದರಿಂದ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಆಶ್ರಯದಲ್ಲಿ ಶೃಂಗಸಮಾವೇಶ ಜರುಗಬೇಕೆಂದು ಸೂಚಿಸಿತು. ಆ ಸಲಹೆಯನ್ನೂ ಸೋವಿಯತ್ ಯೂನಿಯನ್ ಒಡನೆಯೇ ಒಪ್ಪಿಕೊಂಡಿದೆ. ನ್ಯೂಯಾರ್ಕಿನಲ್ಲಲ್ಲದಿದ್ದರೆ ಯೂರೋಪಿನಲ್ಲಿ ಎಲ್ಲೇ ಏರ್ಪಡಿಸಿದರೂ ರಷ್ಯವು ಭಾಗವಹಿಸುವುದೆಂದು ಘೋಷಿಸಿದೆ. ಆದರೆ ಮಾಮೂಲಿನಂತೆ ಅಮೇರಿಕನ್ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಅದನ್ನು ಮುಂದೂಡಲು ಯತ್ನಿಸುತ್ತಿದ್ದಾರೆ. ಒಂದಲ್ಲ ಒಂದು ನೆಪವನ್ನು ಕೊಡುತ್ತಿದ್ದಾರೆ.

ಅಮೇರಿಕ ಮತ್ತು ಬ್ರಿಟನ್ ಪಡೆಗಳು ಕೂಡಲೇ ಲೆಬನಾನ್ ಮತ್ತು ಜೋರ್ಡಾನಿನಿಂದ ಕಾಲ್ತೆಗೆಯಬೇಕು. ಹಾಗಿಲ್ಲದಿದ್ದಲ್ಲಿ ಯುದ್ಧದ ಭೀತಿ ತಪ್ಪದು. ಆದಷ್ಟು ಜಾಗ್ರತೆಯಾಗಿ ಪಶ್ಚಿಮ ಏಷ್ಯದ ಪರಿಸ್ಥಿತಿಯನ್ನು ಪರಿಶೀಲಿಸಲು ಶೃಂಗ ಸಮಾವೇಶ ಜರುಗಬೇಕು. ಇದಕ್ಕಾಗಿ ನಾಡಿನಾದ್ಯಂತ ಪ್ರಬಲವಾದ ಚಳವಳಿ ನಡೆಯಬೇಕು.

ಭಾರತದ ಜನತೆ ಹಾಗೂ ಭಾರತದ ಜನತೆ ಹಾಗೂ ಭಾರತ ಸರಕಾರವು ಶಾಂತಿ ರಕ್ಷಣೆಗಾಗಿ ಮಹತ್ತರವಾದ ಪಾತ್ರ ನಿರ್ವಹಿಸಬೇಕಾಗಿದೆ. ಶೃಂಗ ಸಮ್ಮೇಳನಕ್ಕಾಗಿ ಎಲ್ಲ ಬೆಂಬಲವನ್ನೂ ಈಯಬೇಕಾಗಿದೆ. ನಮ್ಮ ದೇಶವು ಯೋಜನೆಯ ಹಾದಿಯಲ್ಲಿ ನಡೆಯುತ್ತಿರುವಾಗ, ಯೋಜನೆ ಕಾರ್ಯಗತವಾಗಲು ವಿಶ್ವಶಾಂತಿ ಅತ್ಯಗತ್ಯವಾಗಿದೆ. ಸತತವಾಗಿ ಶಾಂತಿಗಾಗಿ ಶ್ರಮಿಸುತ್ತಿರುವ ಭಾರತ ಸರಕಾರವು ಶೃಂಗಸಮ್ಮೇಳನ ಯಶಸ್ವಿಯಾಗುವಂತೆ ಮಾಡಲಿ ಎಂದು ಹಾರೈಸುತ್ತೇವೆ. ಈ ಕಾರ್ಯದಲ್ಲಿ ಇಡೀ ಭಾರತದ ಜನತೆಯ ಹೃತ್ಪೂರ್ವಕವಾದ ಬೆಂಬಲವಿದೆ.

ಪ್ಯಾರಿಸ್ಸಿನ 'ಲೆ ಮೊಂಡೆ' ವಾರಪತ್ರಿಕೆಯನ್ನು ಅಲ್ಜೀರಿಯಾದಲ್ಲಿ ಕಳೆದ ವಾರ ಫ್ರೆಂಚ್ ಸರ್ಕಾರ ಇದ್ದಲ್ಲಿಂದೆಲ್ಲ ವಶಪಡಿಸಿಕೊಂಡಿತು.

ಈ ಪತ್ರಿಕೆಯಲ್ಲಿ ಅಲ್ಜೀರಿಯಾ ವಿಶ್ವವಿದ್ಯಾನಿಲಯದಲ್ಲಿ ಬೋಧಕರಾಗಿದ್ದ ಎಂ. ಔದೀನ್ ಅವರ ಹೆಂಡತಿ ಬರೆದಿದ್ದ ಕಾಗದವೊಂದು ಪ್ರಕಟವಾದುದೇ ಪತ್ರಿಕೆ ಅಲ್ಜೀರಿಯಾದಲ್ಲಿ 'ಅಗೋಚರ'ವಾಗುವಂತೆ ಫ್ರೆಂಚ್ ಸರ್ಕಾರ ಮಾಡಲು ಕಾರಣವಾಯಿತು. ಎಂ. ಔದೀರರನ್ನು ಮೇ 1957ರಂದು ಫ್ರೆಂಚ್ ಸರಕಾರ ಬಂಧಿಸಿತ್ತು ಮತ್ತು ಆಮೇಲೆ ಅವರು 'ಕಣ್ಮರೆ'ಯಾಗಿಬಿಟ್ಟರು. ಅವರ ಸಮಾಚಾರವೇ ಏನೆಂಬುದು ತಿಳಿಯಲಿಲ್ಲ.

ಅವರ ಹೆಂಡತಿ ಶ್ರೀಮತಿ ಔದೀನ್ ಅಲ್ಜೀರಿಯಾದಲ್ಲಿರುವ ಜನರಲ್ ಡಿಗಾಲ್‌ರವರ ಸಚಿವ ಪ್ರತಿನಿಧಿಯಾದ ಎಂ. ಮಾರ್ಲೆ ಅವರನ್ನು ಸಂಬೋಧಿಸಿ "ನಿಮ್ಮ ಪ್ಯಾರಾಚೂಟ್ ಅಧಿಕಾರಿಗಳು ನನ್ನ ಗಂಡನನ್ನು ಹೇಗೆ ಚಿತ್ರಹಿಂಸೆಗೊಳಪಡಿಸಿದರು ಎಂಬುದನ್ನು ಹೇಳುತ್ತೀರಾ? ಅವರ ಸಾವು ಹೇಗಾಯಿತೆಂಬುದನ್ನು ವಿವರಿಸಿರಿ. ಕೊಲೆಪಾತಕಿಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುವುದೆ?" ಎಂದು ಕೇಳಿದ್ದರು. ಎಂ. ಮಾಲೆಯವರು ಆಕಾಶವಾಣಿಯಲ್ಲಿ ಮಾತನಾಡುತ್ತ ಫ್ರೆಂಚ್ ಸೈನಿಕರು ಚಿತ್ರಹಿಂಸೆಯನ್ನು ಕೈಕೊಂಡಿಲ್ಲ ಎಂದು ಹೇಳಿದುದನ್ನು ಪ್ರಸ್ತಾಪಿಸುತ್ತ ಶ್ರೀಮತಿ ಔದೀನ್ ಈ ಕಾಗದ ಬರೆದಿದ್ದರು.

○ ○ ○

ಕೆಂಪು ಚೀಣಾದಲ್ಲಿ ಧಾರ್ಮಿಕ ಸಿದ್ಧಾಂತಗಳನ್ನು ಬದಿಗೊತ್ತಲಾಗಿದೆಯೆಂಬ ಪ್ರಚಾರ ಬುಡವಿಲ್ಲದ್ದೆಂದೂ ಚೀಣಾದಲ್ಲಿ ೮೦ ಮಸೀದಿಗಳಿವೆಯೆಂದೂ ಆ ಪೈಕಿ ೧೨ ಮಸೀದಿಗಳನ್ನು ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದ ಬಳಿಕ ನಿರ್ಮಿಸಲಾಯಿತೆಂದೂ ಇಸ್ಲಾಮ್ ಸಾಹಿತ್ಯ ಅಭ್ಯಾಸಕ್ಕೆ ಯತೇಚ್ಛ ಅವಕಾಶಗಳನ್ನು ಒದಗಿಸಲಾಗಿದೆಯೆಂದೂ ಚೀಣಾದಲ್ಲಿ ಪ್ರವಾಸ ಕೈಗೊಂಡಿದ್ದ ಪಾಕಿಸ್ತಾನದ ಮುಸ್ಲಿಮ್ ಲೀಗ್ ನಾಯಕ ಘಜನಾಫರ್ ಅಲಿಖಾನ್ ಇತ್ತೀಚೆಗೆ ಲಾಹೋರಿನಲ್ಲಿ ಹೇಳಿದರು.

○ ○ ○

ಪೂರ್ವ ಗೋದಾವರಿ ಜಿಲ್ಲೆಯ ಸಮಾಲ್‌ಕೋಟ್ ನಗರಸಭೆಯ ಚುನಾವಣೆಯಲ್ಲಿ ಒಟ್ಟು ೨೦ ಸ್ಥಳಗಳಲ್ಲಿ ೧೩ ಸ್ಥಳಗಳನ್ನು ಕಮ್ಯೂನಿಸ್ಟ್ ಉಮೇದುವಾರರು ವಿಜಯಿಗಳಾಗಿದ್ದಾರೆ. ಇನ್ನುಳಿದ ಏಳು ಸ್ಥಳಗಳು ಕಾಂಗ್ರೆಸ್ಸಿನವರಿಗೆ ದೊರೆತಿವೆ.

○ ○ ○

ಮಧ್ಯಪ್ರಾಚ್ಯದಲ್ಲಿ ವ್ಯವಹಾರಗಳಲ್ಲಿ ನಗ್ನ ಆಕ್ರಮಣ ನಡೆಸಿದ ಬ್ರಿಟನ್ ಮತ್ತು ಅಮೇರಿಕ ಸಾಮ್ರಾಜ್ಯಶಾಹಿಗಳ ಸೈನಿಕ ಕಾರ್ಯಾಚರಣೆಯನ್ನು ಖಂಡಿಸಲು ೫೦೦ ಜನರು ದೆಹಲಿಯಲ್ಲಿರುವ ಅಮೇರಿಕೆಯ ರಾಯಭಾರಿ ಕಛೇರಿಯೆದುರು ಸೇರಿದ್ದರು. "ಸಾಮ್ರಾಜ್ಯಶಾಹಿಗಳೇ ಏಶಿಯಾದಿಂದ ತೊಲಗಿರಿ, ವಿಶ್ವಶಾಂತಿ ಚಿರಾಯುವಾಗಲಿ ಎಂದು ಪ್ರದರ್ಶನಕಾರರು ಘೋಷಿಸುತ್ತಿದ್ದರು.

ಸ್ವಲ್ಪದರಲ್ಲಿ ಸುದ್ದಿ

ಈ ಪ್ರದರ್ಶನವನ್ನು ಕಮ್ಯೂನಿಸ್ಟರು, ಕ್ರಾಂತಿಕಾರಿ ಸೋಷಿಯಲಿಸ್ಟರು, ಫಾರ್ವರ್ಡ್ ಬ್ಲಾಕ್‌ನವರು, ಎ.ಐ.ಟಿ.ಯು.ಸಿ. ಹಾಗೂ ಮತ್ತಿನ್ನಿತರ ಕಾರ್ಮಿಕ ಸಂಘಗಳು ವ್ಯವಸ್ಥೆಗೊಳಿಸಿದ್ದವು. ಅಮೇರಿಕೆಯ ರಾಯಭಾರಿಗೆ ಮನವಿಯೊಂದನ್ನು ಕೂಡ ಒಪ್ಪಿಸಲಾಯಿತು.

○ ○ ○

ಗೋವಾ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷಿಣಿಯಾದ ಸುಧಾ ಜೋಷಿಯವರನ್ನು ಗೋವೆಯ ಪೋರ್ಚ್‌ಗೀಸ್ ಸರಕಾರವು ಬೇಷರತ್ತಾಗಿ ಬಿಡುಗಡೆ ಮಾಡಿದೆ. ಎಪ್ರಿಲ್ 1955ರಲ್ಲಿ ಶ್ರೀಮತಿ ಜೋಷಿ ಮಾಪುಕಾದಲ್ಲಿ ಸತ್ಯಾಗ್ರಹವನ್ನು ಆರಂಭಿಸಿದಾಗ ಆಳುವ ಸರಕಾರ ಅವರನ್ನು ಬಂಧಿಸಿ ೧೮ ವರ್ಷಗಳ ಶಿಕ್ಷೆಯನ್ನು ವಿಧಿಸಿತ್ತು. ಸುಧಾ ಜೋಷಿಯವರೊಂದಿಗೆ ಇನ್ನೊಬ್ಬ ಸ್ವಾತಂತ್ರ್ಯ ಯೋಧರಾದ ಹೆನ್ರಿ ಡಿ'ಸೋಜನರನ್ನು ಬಿಡುಗಡೆ ಮಾಡಲಾಗಿದೆ.

○ ○ ○

ಜಯಪುರದಲ್ಲಿ ಹೈಕೋರ್ಟ್ ಬೆಂಚನ್ನು ಉಳಿಸಿಕೊಳ್ಳುವದಕ್ಕಾಗಿ ನಡೆದ ಆಂದೋಳನದಲ್ಲಿ ೨೪ ರೈತರನ್ನೂ ಒಬ್ಬ ವಕೀಲರನ್ನೂ ಕಳೆದ ವಾರ ಬಂಧಿಸಲಾಗಿದೆ.

○ ○ ○

ಅವಾಮಿ ಲೀಗ್ ನಾಯಕ ಹೆಚ್. ಎಸ್. ಸುಹ್ರಾವರ್ದಿ ಕರಾಚಿಯಲ್ಲಿ ಮಾತನಾಡುತ್ತಿದ್ದಾಗ ಶಿಲಾವರ್ಷಕ್ಕೆ ಗುರಿಯಾಗಬೇಕಾಯಿತು.

ಅರಬ್ ರಾಷ್ಟ್ರೀಯತೆಯನ್ನು ಹೀಗಳೆದು ಸಂಯುಕ್ತ ಅರಬ್ ಗಣರಾಜ್ಯದ ಅಧ್ಯಕ್ಷ ನಾಸ್ಸೇರ್‌ರವರನ್ನು ಅಸಹ್ಯವಾಗಿ ಟೀಕಿಸಿ ಮಾತನಾಡಲಾರಂಭಿಸಿದಾಗ ಅವರ ಭಾಷಣಕ್ಕೆ ಜನಸಮೂಹ ತೀವ್ರ ಆತಂಕವನ್ನೊಡ್ಡತೊಡಗಿತಲ್ಲದೆ ಕಲ್ಲುಗಳನ್ನೂ ಮೆಟ್ಟುಗಳನ್ನೂ ಅವರೆಡೆಗೆ ತೂರಿ "ಸುಹ್ರಾವರ್ದಿ ಮುರ್ದಾಬಾದ್" ಸಾಮ್ರಾಜ್ಯಶಾಹಿಗಳ ಏಜಂಟ್-ಮುರ್ದಾಬಾದ್" ಎಂದು ಅಬ್ಬರಿಸಿತು.

ಸಶಸ್ತ್ರ ಪೋಲೀಸ್ ದಳದ ರಕ್ಷಣೆಯಲ್ಲಿ ಮರಳಬೇಕಾಯಿತು. ಹತ್ತು ನಿಮಿಷ ಮಾತನಾಡಲಿಕ್ಕೂ ಅವರಿಗೆ ಅವಕಾಶ ಕೊಡಲಿಲ್ಲ ಜನ.

ವಾರದ ವಾರ್ತಾ ಸಮೀಕ್ಷೆ

ಆಂಧ್ರ ಭೂಸುಧಾರಣಾ ಮಸೂದೆ

ನಿರೀಕ್ಷಿಸಲಾಗಿದ್ದ ಆಂಧ್ರ ರಾಜ್ಯ ಭೂಸುಧಾರಣಾ ಮಸೂದೆಯನ್ನು ಸರಕಾರ ಪ್ರಕಟಿಸಿದೆ. ಮಸೂದೆಯಲ್ಲಿ ಅನೇಕ ನ್ಯೂನತೆಗಳಿದ್ದು, ಈ ಸುಧಾರಣೆಯ ದೆಸೆಯಿಂದ ಜಮೀನಿಲ್ಲದ ರೈತರ ನಡುವೆ ಹಂಚಲು ಅತ್ಯಲ್ಪ ಭೂಮಿ ದೊರಕುವುದೆಂದು ತಿಳಿದುಬಂದಿದೆ.

ಆಂಧ್ರ ರಾಜ್ಯದ ಕಂದಾಯ ಸಚಿವರು ಸುಮಾರು ಒಂದು ಲಕ್ಷ ಎಕರೆ ಜಮೀನು ಹಂಚಲಿಕ್ಕೆ ಸಿಗುವುದೆಂದು ತಿಳಿಸಿದ್ದರೂ, ಅದು ಕಾರ್ಯತಃ ಸಾಧನೆಯಾಗುವುದು ಸಂಶಯವಾಗಿದೆ.

ಭೂಹಿಡುವಳಿಯ ಪರಿಮಿತಿಯನ್ನು ಗೊತ್ತುಮಾಡುವಾಗ ಹಿಡುವಳಿಯು ಒಟ್ಟು 5400 ರೂ. ಆದಾಯದಷ್ಟಿರಬೇಕೆಂದು ಹೇಳಲಾಗಿದೆ. ಯೋಜನಾ ಆಯೋಗ ಸೂಚಿಸಿರುವುದು ರೂ. 3600 ಇರಬೇಕು ಎಂದು. ಪ್ರಸಕ್ತ ತೆಲಿಂಗಾಣ ಪ್ರದೇಶದಲ್ಲಿ ರೂ. 3000 ಹಿಡುವಳಿ ಮಿತಿ ಇದೆ. ಈ ಹೊಸ ಮಸೂದೆಯಿಂದಾಗಿ ತೆಲಂಗಾಣ ಪ್ರದೇಶದಲ್ಲಿ ತೀರಾ ತೊಂದರೆಯಾಗುವ ಸಂಭವವಿದೆ.

ಕಳೆದ ಮೂರು ವರ್ಷಗಳಲ್ಲಿ ಉತ್ಪನ್ನ ಮತ್ತು ಹತ್ತು ವರ್ಷದ ಸರಾಸರಿ ಬೆಲೆಯನ್ನು ಗಣನೆಗೆ ತೆಗೆದುಕೊಂಡು ಹಿಡುವಳಿಯನ್ನು ನಿರ್ಧರಿಸುವುದರಿಂದ ನಿಜವಾಗಿ ಹಿಡುವಳಿಯ ಪರಿಮಿತಿಯು ಇನ್ನೂ ಹೆಚ್ಚಾಗಿರುವುದು. ಇದಲ್ಲದೆ ಭೂಮಾಲಿಕರಿಗೆ ಹಿಡುವಳಿಯ ಮಿತಿಯ ಮೇಲ್ಪಟ್ಟು ಅದರ ಮೂರನೆ ಒಂದು ಭಾಗ ಗೋಮಾಳ ಪ್ರದೇಶವನ್ನು ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ಹಿಂದೆ ಕಾಂಗ್ರೆಸ್ ಶಾಸನಸಭಾ ಪಕ್ಷದಲ್ಲೇ ಗೋಮಾಳಕ್ಕೆ ನಾಲ್ಕನೆ ಒಂದು ಭಾಗ ಅವಕಾಶ ಕೊಡಬೇಕೆಂದು ಸೂಚಿಸಲಾಗಿತ್ತು.

ಇವೆಲ್ಲವನ್ನೂ ಎಕರೆಗಳಲ್ಲಿ ಲೆಖ್ಖ ಹಾಕಿದರೆ ಹಿಡುವಳಿ ಮಿತಿಯು ಸುಮಾರು 50 ಎಕರೆ ತರಿ ಜಮೀನು ಅಥವ 200 ಎಕರೆ ಖುಷ್ಕಿ ಜಮೀನು ಆಗುವುದು.

ಕಮ್ಯೂನಿಸ್ಟ್ ಪಾರ್ಟಿ ಮತ್ತಿತರ ವಿರೋಧ ಪಕ್ಷಗಳು ಸರಕಾರ ತಂದಿರುವ ಮಸೂದೆಯು ಕಣ್ಣೊರಸುವಂಥದ್ದಿದೆ ಎಂದು ಟೀಕಿಸಿವೆ. ಆಚಾರ್ಯ ವಿನೋಬಾ ಭಾವೆಯವರು ಸರ್ವೋದಯ ಸಮ್ಮೇಳನ ಮತ್ತು ಆಂಧ್ರ ಪ್ರದೇಶ ಭೂದಾನ ಸಮಿತಿ ಇವು ಭೂಹಿಡುವಳಿಯ ಮಿತಿ ಅಧಿಕವಾಗಿರಿಸಿರುವುದನ್ನು ಟೀಕಿಸಿವೆ.

ಮಸೂದೆಯ ಮೂಲ ಉದ್ದೇಶವು ಹಂಚುವುದಕ್ಕೆ ಜಮೀನನ್ನು ದೊರಕಿಸಿಕೊಳ್ಳುವುದಲ್ಲ, ಆದರೆ ಪ್ರಸಕ್ತ ಭೂಮಾಲಿಕರ ಹಿಡುವಳಿಗಳನ್ನು ಪುನರ್‌ವ್ಯವಸ್ಥಿತಗೊಳಿಸಿ ಅಸಮಾನತೆಯನ್ನು ಹೋಗಲಾಡಿಸುವುದಾಗಿದೆ ಎಂದು ಸರಕಾರವು ಹೇಳಿದೆ. ಅಂದ ಮೇಲೆ ಭೂಸುಧಾರಣೆ ಮಸೂದೆ ಎಷ್ಟುಮಟ್ಟಿಗೆ ರೈತರಿಗೆ ಅನುಕೂಲವಾದೀತು ಎಂಬುದು ಗೋಚರವಾಗುತ್ತದೆ.

ದೆಹಲಿ ಕಾಂಗ್ರೆಸ್ಸಿನ ಬಿಕ್ಕಟ್ಟು

ದೆಹಲಿ ಮುನಿಸಿಪಲ್ ಕಾರ್ಪೊರೇಶನ್ ಚುನಾವಣೆಗಳ ನಂತರದಲ್ಲಿ ಕಾಂಗ್ರೆಸ್ಸಿನಲ್ಲಿ ತೀವ್ರವಾದ ಬಿಕ್ಕಟ್ಟು ತಲೆದೋರಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸಿಗರ ವಿರೋಧ ಕೆಲಸ ಮಾಡಿದರೆಂಬ ಆಪಾದನೆಯ ಮೇಲೆ, ಹಲವು ಕಾಂಗ್ರೆಸ್ ನಾಯಕರುಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಯಿತು. ದೆಹಲಿ ಕಾಂಗ್ರೆಸ್ ಗುಂಪುಕಾಳಗದಲ್ಲಿ ನಾಯಕರಾದ ಬ್ರಹ್ಮಪ್ರಕಾಶ ಮತ್ತವರ ಕೆಲವು ಹಿಂಬಾಲಕರ ಮೇಲೆ ಶಿಸ್ತಿನ ಕ್ರಮತೆಗೆದುಕೊಳ್ಳದೆ ಹಾಗೇ ಬಿಡಲಾಯಿತು.

ಕಾಂಗ್ರೆಸ್ಸಿನ ಈ ಪಕ್ಷಪಾತ ನೀತಿಯನ್ನು ವಿರೋಧಿಸಿ ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷಿಣಿಯು ಪಾರ್ಲಿಮೆಂಟ್ ಸದಸ್ಯರೂ ಆದ ಶ್ರೀಮತಿ ಸುಭದ್ರಾ ಜೋಷಿ ಮತ್ತು ಮಾಜಿ ಅಧ್ಯಕ್ಷರೂ ಹಾಗೂ ಪಾರ್ಲಿಮೆಂಟ್ ಸದಸ್ಯರೂ ಆದ ಸಿ. ಕೆ. ನಾಯರ್‌ರವರೂ ಕಾಂಗ್ರೆಸ್ಸಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಇವರ ರಾಜೀನಾಮೆಯಿಂದಾಗಿ ಕಾಂಗ್ರೆಸ್ಸಿನಲ್ಲಿ ತೀವ್ರವಾದ ಬಿಕ್ಕಟ್ಟು ತಲೆದೋರಿ ಅವರ ಹಿಂಬಾಲಕರೆಲ್ಲರೂ ಸಂಸ್ಥೆಗೆ ರಾಜೀನಾಮೆ ಕೊಡುವ ಪ್ರಶ್ನೆ ಬಂದಿದೆ. ಇವರ ಗುಂಪಿಗೆ ಸೇರಿದ 500ಮಂದಿ ಕಾಂಗ್ರೆಸ್ ಕಾರ್ಯಕರ್ತರು ಸಭೆಸೇರಿ ಮಂಡಲ ಕಾಂಗ್ರೆಸ್ ಚುನಾವಣೆಗಳಿಗೆ ಬಹಿಷ್ಕಾರ ಹಾಕಲು ನಿರ್ಧರಿಸಿದ್ದಾರೆ. ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡುವ ಯತ್ನವು ಸಫಲವಾಗದೆ ಹೋಗಿದೆ. ಬಿಕ್ಕಟ್ಟನ್ನು ಪರಿಹರಿಸಲಾಗದೆ ಆಗಸ್ಟ್ 5ಮತ್ತು 6 ರಂದು ನಡೆಯಬೇಕೆಂದು ಮಂಡಲ ಸಮಿತಿಯ ಚುನಾವಣೆಗಳನ್ನು ಮುಂದೆ ಹಾಕಲಾಗಿದೆ. ಕೆಲವು ಕೇಂದ್ರ ಸಚಿವರುಗಳೂ ಸಹ ಭಾಗವಹಿಸಿದ್ದಾರೆಂದು ತಿಳಿದುಬಂದಿದೆ.

ಮುಂಬಯಿ ಕಾರ್ಮಿಕರ ಸೌಹಾರ್ದ ಮುಷ್ಕರ

ಬೋನಸ್ ಮತ್ತು ಕೆಲಸದಿಂದ ವಜಾ ಮಾಡಲ್ಪಟ್ಟಿರುವವರನ್ನು ಕೆಲಸಕ್ಕೆ ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆಗಾಗಿ ಕಳೆದ 110 ದಿನಗಳಿಂದಲೂ ಮುಷ್ಕರ ನಡೆಸುತ್ತಿರುವ 5000 ಪ್ರಿಮಿಯರ್ ಆಟೋಮೊಬೈಲ್ ಕಾರ್ಖಾನೆ ನೌಕರರಿಗೆ ಬೆಂಬಲವೀಯಲು ಮುಂಬಯಿನ 7 ಲಕ್ಷ ಕಾರ್ಮಿಕರು ಜುಲೈ 25ರಂದು ಸಹಾನುಭೂತಿಪರ ಮುಷ್ಕರ ನಡೆಸಿದರು. ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಸಂಗಾತಿಗಳಿಗೆ ಮುಂಬಯಿ ಕಾರ್ಮಿಕ ವರ್ಗದ ಸಹಾನುಭೂತಿ ಪ್ರದರ್ಶನ ಇದಾಗಿದೆ.

ಅದೇ ಮುಂಬಯಿನಗರ ಅಂದು ನಿಶ್ಚೇಷ್ಟಿತವಾಗಿತ್ತು. ಹತ್ತಿಗಿರಣಿ ಕಾರ್ಮಿಕರು, ಇಂಜನಿಯರಿಂಗ್ ಕೆಲಸಗಾರರು, ಮುನಿಸಿಪಲ್ ಕೆಲಸಗಾರರು ಬಂದರು ಕೆಲಸಗಾರರು, ಸಾರಿಗೆ ಕೆಲಸಗಾರರು ಎಲ್ಲರೂ ಒಕ್ಕೊರಲಿನಿಂದ ಮುಂಬಯಿ ಸರಕಾರದ ಕಾರ್ಮಿಕ ವಿರೋಧ ನೀತಿಯನ್ನು ಪ್ರತಿಭಟಿಸಿದರು. ಸುಮಾರು 12000ಬ್ಯಾಂಕ್ ನೌಕರರೂ, ಜೀವವಿಮಾ ಕಾರ್ಪೊರೇಷನ್ ಮತ್ತಿತರ ಉದ್ಯಮಗಳ ಮಧ್ಯಮವರ್ಗದ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದು ಗಮನೀಯವಾಗಿದೆ.

ಮುಷ್ಕರದ ಕರೆಯನ್ನು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಹಿಂದ್ ಮಜ್ದೂರ್ ಸಭಾ ಮತ್ತಿತರ ಸಂಘಗಳ ಸಂಯುಕ್ತ ಕಾರ್ಯಾಚರಣಾ ಸಮಿತಿಯು ಇತ್ತಿದ್ದಿತು. ಇದು ಇತ್ತೀಚೆಗೆ ನಡೆದಿರುವ ಸಂಯುಕ್ತ ಕಾರ್ಯಾಚರಣೆಯಲ್ಲಿ ಅತ್ಯಂತ ಜಯಪ್ರದವಾದುದಾಗಿದೆ ಅಲ್ಲದೆ ಇದು ಕಾರ್ಮಿಕರ ನಡುವೆ ಐಕ್ಯ ಕಾರ್ಯಾಚರಣೆಯ ಬಗ್ಗೆ ಬೆಳೆಯುತ್ತಿರುವ ಅಭಿಮತವನ್ನೂ ವ್ಯಕ್ತಗೊಳಿಸುತ್ತದೆ.

ಮುಷ್ಕರವನ್ನು ಮುರಿಯಲು 'ಇಂಟಕ್'' ನಾಯಕರುಗಳು ಯತ್ನವೆಲ್ಲವೂ ವಿಫಲವಾಯಿತು. 'ಇಂಟಕ್' ಸಂಘಗಳಲ್ಲಿರುವ ಕೆಲಸಗಾರರೂ ಸಹ ಮುಷ್ಕರದಲ್ಲಿ ಭಾಗವಹಿಸಿ ತಮ್ಮ ನಾಯಕರುಗಳ ಐಕ್ಯಭಂಜಕ ನೀತಿಗೆ ಸರಿಯಾದ ಉತ್ತರ ಕೊಟ್ಟರು.

ನಗರದ ನಾನಾ ಭಾಗಗಳಲ್ಲಿ ಕಾರ್ಮಿಕರು ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ, ಮತ್ತು ಪ್ರಿಮಿಯರ್ ಆಟೋಮೊಬೈಲ್ ಕೆಲಸಗಾರರಿಗೆ ಬೆಂಬಲವೀಯಲು ನಡೆಸಿದ ಪ್ರದರ್ಶನಗಳಲ್ಲಿ ಯಾವ ಘಟನೆಯೂ ನಡೆಯದೆ ಶಾಂತರೀತಿಯಲ್ಲಿ ನಡೆದುದು ಗಮನಾರ್ಹವಾಗಿದೆ.

ಪಾದ್ರಿಮೆಂಡೋಜರ ರಾಜಿನಾಮೆ ಹಿನ್ನಲೆಯ

ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಹಾಗೂ ಜಸೂಯಿಟ್ಸ್ ಸಂಘದ ಸದಸ್ಯರಾಗಿದ್ದ ಪಾದ್ರಿ ಮೆಂಡೋಜರವರು ರೋಮನ್ ಕ್ಯಾಥೊಲಿಕ್ ವಿದೇಶೀ ಮಿಷನರಿಗಳ ಭಾರತ ವಿರುದ್ಧ ಕುತಂತ್ರವನ್ನು ಪ್ರತಿಭಟಿಸಿ ರಾಜೀನಾಮೆ ಇತ್ತಿದ್ದಾರೆ. ಜುಲೈ 15 ರಂದು ರಾಜೀನಾಮೆ ಇತ್ತ ಮೆಂಡೋಜರವರು ಜಸೂಯಿಟ್ಸ್ ಸಂಘದಲ್ಲಿ ಕಳೆದ 25 ವರ್ಷಗಳಿಂದಲೂ ಸದಸ್ಯರಾಗಿದ್ದರು.

ಮುಂಬಯಿನ ಸೇಂಟ್‌ಕ್ಸೇವಿಯರ್ ಕಾಲೇಜಿನಲ್ಲಿ ಸ್ಪಾನಿಷ್ ಜಸೂಯಿಟ್ಸ್‌ರ ಕಿರುಕುಳ ಮತ್ತು ಭಾರತ ವಿರೋಧಿ ನೀತಿಯನ್ನು ತಾಳಲಾರದೆ ತಾವು ರಾಜೀನಾಮೆ ಇತ್ತಿರುವುದಾಗಿ ತಿಳಿಸಿದ್ದಾರೆ. ತಮ್ಮ ರಾಜೀನಾಮೆಯ ಕುರಿತು ಅವರು "ನಾನು ನನ್ನ ರಾಷ್ಟ್ರವನ್ನು ಪ್ರೀತಿಸುತ್ತೇನೆ, ಗೋವದಲ್ಲಿ ನಾನು ಹುಟ್ಟಿದವನಾದ್ದರಿಂದ ಗೋವಾ ನನಗೆ ಬೇರಾಗಿದೆ, ಅದು ವಿದೇಶೀ ಆಡಳಿತೆಯಿಂದ ವಿಮುಕ್ತವಾಗಬೇಕೆಂದು ಭಾರತ ತಾಯ್ನಾಡಿನಲ್ಲಿ ಸೇರಬೇಕೆಂದು ನಾನು ಆಶಿಸುತ್ತೇನೆ; ನಾನು ಸ್ವಾತಂತ್ರ್ಯವನ್ನು ಗೌರವಿಸುತ್ತೇನೆ, ನನ್ನ ವಿದ್ಯಾರ್ಥಿ ಸಮೂಹದಲ್ಲಿ ಬಹುತೇಕ ಮಂದಿ ಕ್ರಿಸ್ತರಲ್ಲದ ವಿದ್ಯಾರ್ಥಿಗಳಿರುವುದರಿಂದ ಅವರ ಮೇಲೆ ಕ್ಯಾಥೊಲಿಕ್ ಚರ್ಚಿನ ಪ್ರಚಾರವನ್ನು ಹೊರಿಸಲು ಇಚ್ಛಿಸುವುದಿಲ್ಲ" ಎಂದು ತಿಳಿಸಿದ್ದಾರೆ.

"ನಾನು ರೋಮನ್ ಕ್ಯಾಥೊಲಿಕ್ ಸಂಘಕ್ಕೆ ಸೇರಿದ್ದೇನೆ, ಪೋಪರ ಅಧಿಕಾರದಲ್ಲಿ ನನಗೆ ವಿಶ್ವಾಸವಿದೆ. ಆದರೆ ವಿದೇಶೀ ಮಿಷಿನರಿಗಳಿಗೆ ಭಾರತದಲ್ಲಿರಲು ಜಾಗವಿಲ್ಲ ಎಂದು ಭಾವಿಸುತ್ತೇನೆ, ಏಕೆಂದರೆ ಅವರಿಗೆ ಭಾರತೀಯರ ನಡವಳಿಕೆ ಮತ್ತು ಸ್ಥಿತಿಗತಿಗಳು ಅರ್ಥವಾಗುವುದಿಲ್ಲ. ಈ ವಿದೇಶೀ ಮಿಷಿನರಿಗಳು ಭಾರತದಲ್ಲಿ ಇನ್ನೂ ಸಹ ವಸಾಹತುವಾದೀ ಪರಂಪರೆಯನ್ನೇ ಅನುಸರಿಸುತ್ತಿವೆ" ಎಂದು ಹೇಳಿದ್ದಾರೆ.

ಪಾದ್ರಿಮೆಂಡೋಜರರವರು ಭಾರತದಲ್ಲಿ ವಿದೇಶೀ ಮಿಷಿನರಿಗಳ ಬಗ್ಗೆ ನಿಯೋಗಿ ಸಮಿತಿಯು ಮಾಡಿರುವ ವರದಿಯು ಬಹ್ವಂಶ ನಿಜವಾದ್ದಾಗಿದೆ ಎಂದೂ ತಿಳಿಸಿದ್ದಾರೆ.

ರಾಜೀನಾಮೆ ಇತ್ತ ನಂತರ ಪಾದ್ರಿಮೆಂಡೋಜರವರು ಬೆಳಗಾವಿಯಲ್ಲಿರುವ ರಾಣಿ ಪಾರ್ವತಿದೇವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಭಾರತದ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಈ ವಿದೇಶೀ ಮಿಷಿನರಿಗಳವರು ನಾಗಾ ಪ್ರದೇಶದಲ್ಲಿ, ಗೋವಾದಲ್ಲಿ ಮತ್ತು ಭಾರತದ ವಿವಿಧ ಕಡೆಗಳಲ್ಲಿ ನಡೆಸುತ್ತಿರುವ ರಾಷ್ಟ್ರ ವಿರೋಧಿ ಚಟುವಟಿಕೆಗಳು ಎಲ್ಲರಿಗೂ ತಿಳಿದಿವೆ. ಪಾದ್ರಿಮೆಂಡೋಜರವರ ರಾಜೀನಾಮೆ ಇದರ ಗಂಭೀರತೆಯನ್ನು ಬೆಳಕಿಗೆ ತಂದಿದೆ. ಭಾರತ ಸರಕಾರ ಈಗಲಾದರೂ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಗತ್ಯ.

'ಬಾಗ್‌ದಾದ್' ಕೂಟದ ಸಭೆ

ಇರಾಕಿನಲ್ಲಿ ಅರಸೊತ್ತಿಗೆಯ ಪತನದ ನಂತರ ಬಾಗದಾದ್ ಕೂಟದ ಬುಡಕ್ಕೇ ಕೊಡಲಿಪೆಟ್ಟು ಬಿದ್ದಂತಾಯಿತು. ಬ್ರಿಟಿಷ್ ಮತ್ತು ಅಮೇರಿಕನ್ ಸಾಮ್ರಾಜ್ಯವಾದಿಗಳು ತಮ್ಮ ಕುತಂತ್ರವನ್ನು ಮುಂದುವರಿಸಲು ಯತ್ನಸಾಗಿಸಿವೆ. ಅಮೇರಿಕ ಬಾಗದಾದ್ ಕೂಟದ ಪೂರ್ಣ ಸದಸ್ಯನಾಗಿಲ್ಲ, ಆದರೆ ಈಗ ಬಾಗದಾದ್ ಕೂಟದ ರಾಷ್ಟ್ರಗಳೊಂದಿಗೆ ಒಪ್ಪಂದಮಾಡಿಕೊಳ್ಳುವುದಾಗಿ ಘೋಷಿಸಿದೆ. ಲಂಡನಿನಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್, ಅಮೇರಿಕಾ ವಿದೇಶಾಂಗ ಸಚಿವ ಡಲ್ಲೆಸ್, ಟರ್ಕಿ, ಪಾಕೀಸ್ತಾನ ಮತ್ತು ಇರಾನಿನ ಪ್ರಧಾನ ಮಂತ್ರಿಗಳು ಭಾಗವಹಿಸಿದ್ದರು. ಸಭೆಯ ನಂತರದಲ್ಲಿ ಇತ್ತಿರುವ ಹೇಳಿಕೆಯಲ್ಲಿ ಯಥಾಪ್ರಕಾರ ಆಕ್ರಮಣವನ್ನು ಎದುರಿಸುವುದೇ ತಮ್ಮ ಧ್ಯೇಯವೆಂದು ಹೇಳಲಾಗಿದೆ. ಈ ಮಿಲಿಟರಿ ಕೂಟದ ರೂಪವನ್ನು ಒದಗಿಸಲು ಬ್ರಿಟನ್ ವಿರೋಧವಿದೆ. ಅಮೇರಿಕಾ ಪೂರ್ಣ ಸದಸ್ಯನಾಗಿಲ್ಲದಿದ್ದರೂ, ಅದು ಔಪಚಾರಿಕವಾಗಿ ಮಾತ್ರ. ಈ ಆಕ್ರಮಣಕಾರೀ ಮಿಲಿಟರಿ ಕೂಟ ಅವಸಾನವನ್ನೆದುರು ನೋಡುತ್ತಿರುವಾಗ ಅದಕ್ಕೆ ಜೀವ ತುಂಬಲು ಸಾಮ್ರಾಜ್ಯವಾದಿಗಳು ಯತ್ನಿಸಿದ್ದಾರೆ. ಬಾಗದಾದ್ ಕೂಟದಲ್ಲಿರುವ ರಾಷ್ಟ್ರಗಳು ನೂತನ ಇರಾಕ್ ಸರಕಾರಕ್ಕೆ ಮನ್ನಣೆ ಕೊಡುವ ಪ್ರಶ್ನೆಯನ್ನು ಮುಂದಕ್ಕೆ ಹಾಕಿವೆ.

(ಕೊನೇ ಪುಟ ನೋಡಿ)

ಹುರಿಗಾಳು

ಕಾರಾಗಾರಗಳಲ್ಲಿಯ ಕೈದಿಗಳ ಜೀವನವನ್ನು ಸುಧಾರಿಸಲು ಹೊಸ ಸುಧಾರಣೆಗಳನ್ನು ಜಾರಿಗೆ ತರಲಾಗುವುದೆಂದು ಉಪಮಂತ್ರಿ ಬಸವಲಿಂಗಪ್ಪನವರು ಹೇಳಿದ್ದಾರೆ.

ಈಗ ಹೊರಗಿರುವ ಜೀವನಕ್ಕಿಂತಲೂ ಜೈಲಿನೊಳಗಿನ ಜೀವನವೇ ಒಳ್ಳೆಯದಾಗುವಂತಾದರೆ ನಾವೂ ಜೈಲುವಾಸಿಗಳೇ [ಕೈದಿಗಳೆನ್ನಬಾರದೆಂದೂ ಜೈಲುವಾಸಿಗಳೆನ್ನಬೇಕೆಂದೂ ಸಚಿವರೇ ಹೇಳಿದ್ದಾರೆ] ಯಾಕಾಗಬಾರದೆಂದು ಬೆಂಗಳೂರಿನ ಅನೇಕ ಪ್ರದೇಶಗಳಲ್ಲಿಯ ಹಾಗೂ ನಾಡಿನನೇಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂದು ಇನ್ನೂ ವರದಿಯಾಗಲಿಲ್ಲ.

ಜೈಲುವಾಸ್—ಜಿಂದಾಬಾದ್ !

० ० ०

ಉತ್ತರ ಪ್ರದೇಶದ ನವಾಗರ್ಹ್ ತಹಶೀಲ್ ಕಛೇರಿಯೆದುರು ನೂರು ಜನ ಪ್ರದರ್ಶನಕಾರರು "ಹೊಟ್ಟೆಗೆ ಅನ್ನ ಕೊಡಿ, ಇಲ್ಲವೆ ಜೈಲಿಗೆ ಕಳುಹಿಸಿ" ಎಂದು ಪ್ರದರ್ಶನ ನಡೆಸಿದರೆಂದೂ ತಹಶೀಲ್ ಕೆಲಸ ಕಾರ್ಯಗಳಿಗೆ ತೊಂದರೆಯಾದುದರಿಂದ ಗಳಲನೇ ನಿಬಂಧನೆಯನ್ನು ಜಾರಿಗೆ ತರಲಾಯಿತೆಂದೂ ಅಲ್ಲಿಯ ಗೃಹ ಮಂತ್ರಿ ಕಮಲಪಾಟಿ ತ್ರಿಪಾಠಿ ಹೇಳಿದ್ದಾರೆ. ನಿಬಂಧನೆಯಂತೆ ೧೯ ಜನರ ದಸ್ತಗಿರಿಯನ್ನೂ ಮಾಡಲಾಯಿತು.—ಸುದ್ದಿ.

ಪ್ರದರ್ಶನಕಾರರ ಬೇಡಿಕೆಯಲ್ಲಿ ಒಂದನ್ನಾದರೂ ಸರಕಾರ ತಕ್ಷಣವೇ ಜಾರಿಗೆ ತಂದಿತಲ್ಲ ಎಂದು ಸರ್ಕಾರೀ ವಲಯಗಳಲ್ಲಿ ಬೆನ್ನು ಚಪ್ಪರಿಸಿಕೊಳ್ಳಲಾಯಿತಂತೆ.

० ० ०

ದೆಹಲಿಯ ಕೇಂದ್ರ ಸೆಕ್ರೆಟರಿಯೆಟ್ ಎದುರು ಕಾರೊಂದು ಬಂದು ನಿಂತಿತು. ಒಳಗಿನಿಂದ ಖಾದೀಧಾರಿಯಾದ ದಪ್ಪ ದೇಹಿಗಳೊಬ್ಬರು ಇಳಿದರು. ಇಳಿದವರು ಸೆಕ್ರೆಟರಿಯೇಟ್ ತಮ್ಮ ಸ್ವಂತ ಆಸ್ತಿಯೇನೋ ಎಂಬುವಂತೆ ಬಿಗುಮಾನದಲ್ಲೇ (ಮೇಲೇರಲು) ಲಿಫ್ಟ್ ಬಳಿ ಬಂದರು. ಆದರೆ ಅಲ್ಲಿಯೇ ಇದ್ದ ಪಹರೆಯವನು ಅವರನ್ನು ಬಿಡಲಿಲ್ಲ. ಯಾಕೆಂದರೆ ಆತ ಸರಕಾರಿ ಸಂಬಳ ಪಡೆದು ಆ ಕಾರ್ಯ ಮಾಡುತ್ತಿದ್ದ. ನ್ಯಾಯವೂ ಹೌದು. ಅಂತೆಯೇ ಕೇಳಿದ.

"ಪ್ರವೇಶಾಜ್ಞೆ ನಿಮ್ಮ ಬಳಿ ಇದೆಯೇ?"

ಈ ಸಭ್ಯಗೃಹಸ್ಥರ ಹತ್ತಿರವಿರಲಿಲ್ಲ. ಅಂತೆಯೇ ಮರು ಪ್ರಶ್ನೆ ಹಾಕಿದರು: "ನಾನು ಯಾರೆಂಬುದು ಗೊತ್ತಿಲ್ಲವೇ ? ನಾನು ಜಗಜೀವನ್ ರಾಮ್". ಓ ಹಾಗಾದರೆ ಅವರು ಕೇಂದ್ರದ ರೈಲ್ವೆ ಸಚಿವರು. ಆದರೆ ಪಹರೆಯವನಿಗೆ ಗೊತ್ತಿರಲಿಲ್ಲ.

ಗೃಹಶಾಖೆಯ ಅಧಿಕಾರಿಗಳು ಬಂದು ಮಂತ್ರಿಗಳನ್ನು ಈ 'ಮುಜುಗರದ' ಪರಿಸ್ಥಿತಿಯಿಂದ ಬಿಡುಗಡೆ ಮಾಡಿ ಮೇಲೆ ಕರೆದುಕೊಂಡುಹೋದರು. ಆ ಮೇಲೆ ಉನ್ನತ ಮಟ್ಟದ ರಕ್ಷಣಾಧಿಕಾರಿಗಳು ಸಚಿವರ ಬಳಿ ಬಂದು ಈ ಪ್ರಸಂಗದ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಆದರೆ ಮಂತ್ರಿಗಳು ದಯಾಳುವಾಗಿದ್ದರು, ಅಂತೆಯೆ "ಪಹರೆಯವನನ್ನು ಕೆಲಸದಿಂದ ವಜಾ ಮಾಡಬೇಡಿ" ಎಂದು ಉಪದೇಶ ಮಾಡಿದರು.

—ಒಂದು ಪುಟ್ಟ ವರದಿ.

ವಜಾ ಮಾಡಬೇಕೆಂದು ಯಾರು ಹೇಳಿದರು ? ಹಾಗಿದ್ದರೆ ಮಂತ್ರಿಗಳನ್ನೇ ಯಾಕೆ ವಜಾ ಮಾಡಬಾರದು ? ಅಂದರೆ ನಮ್ಮ ರೈಲ್ವೆಗಳಾದರೂ ಆ ಮೇಲೆ ಸುಸೂತ್ರ ಓಡಿಯಾವು ಎಂದು ರೈಲ್ವೆ ಅಪಾಯದಿಂದ ಪಾರಾದವರೊಬ್ಬರ ಪ್ರತಿಕ್ರಿಯೆ.

० ० ०

ಕೇರಳ ಸರ್ಕಾರವನ್ನು ಬುಡಮೇಲು ಮಾಡಬೇಕೆಂಬ ಕೇವಲ ಮತ್ಸರ ಪೂರಿತ ನೀತಿಯಿಂದ ಪ್ರಚೋದಿಸಲ್ಪಟ್ಟ ವಿದ್ಯಾರ್ಥಿಗಳ ಮುಷ್ಕರದಿಂದ ರಾಜ್ಯದಲ್ಲುಂಟಾದ ಕಠಿಣ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ನೊಡನೆ ಮಾತನಾಡಲು ಕೇರಳ ಕಾಂಗ್ರೆಸ್ಸಿಗರು ವಿಮಾನ ಮೂಲಕ ದೆಹಲಿಗೆ ಹಾರುತ್ತಾರೆ ಎಂಬ ಸುದ್ದಿ ಬಂತು.

ಅದೇ ದಿನ ಬೊಂಬಾಯಿಯಲ್ಲಿ ನಡೆದ ಮಹಾ ಮುಷ್ಕರದ ವಾರ್ತೆಯೂ ಅದೇ ಪುಟದಲ್ಲಿತ್ತು. ಮುಂಬೈ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಮತ್ತು 110 ದಿನಗಳಿಂದ ಪ್ರೀಮಿಯರ್ ಆಟೊಮೊಬೈಲ್ ಕಾರ್ಖಾನೆಯ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿಯನ್ನು ತೋರಿಸಲು ಬೊಂಬಾಯಿಯ ಏಳು ಲಕ್ಷ ಕಾರ್ಮಿಕರು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ಇಡೀ ನಗರವೇ ಸ್ತಂಭೀ ಭೂತವಾಯಿತು.

ದುರ್ಬೋಧನೆಗೊಳಗಾದ ಎಲ್ಲೋ ಹಲವು ಚಿಲ್ಲರೆ ಸಹಸ್ರ ವಿದ್ಯಾರ್ಥಿಗಳು ಮುಷ್ಕರ ಹೂಡಿದರೆ "ಶೋಚನೀಯ ಪರಿಸ್ಥಿತಿ"ಯೆಂದು ದೂರುವ ಕಾಂಗ್ರೆಸ್ಸಾಗಲಿ ಅವರ ಸರ್ಕಾರವಾಗಲಿ 'ಕಿವುಡ ಕಿವಿ'ಗಳನ್ನು ತಿರುಗಿಸುವುದು 'ಕುರುಡು' ಸರ್ಕಾರ (ಪಕ್ಷ)ವೂ ಹೌದು ಎಂದು ಒಬ್ಬರು ಹೇಳಿದರೆ ಇನ್ನೊಬ್ಬರು ಈ ಕಿವುಡ, ಕುರುಡ ಇನ್ನು ಕಾಲನ್ನೂ ಕಳೆದುಕೊಂಡ (ಆಡಳಿತಾ ಕಾಲನ್ನು ಕೂಡ) ಕುಂಟನಾಗುತ್ತಾನೆ ಎಂದು ಮತ್ತೊಬ್ಬರ ಅಭಿಪ್ರಾಯ.

० ० ०

ಎಡಪಕ್ಷಗಳ ಟ್ರೇಡ್ ಯೂನಿಯನ್ ನಾಯಕರು ವ್ಯವಸ್ಥೆಗೊಳಿಸಿದ್ದ ಈ ಮುಷ್ಕರದಲ್ಲಿ ಕಾಂಗ್ರೆಸ್ ಸರ್ಕಾರದ ಕೈಗೊಂಬೆ ಲಾದ 'ಇಂಟಕ್' 'ಈ ಮುಷ್ಕರದಲ್ಲಿ ಕಾರ್ಮಿಕರು ಭಾಗವಹಿಸಬಾರದು' ಎಂದು ದೀನತನದಿಂದ ಪ್ರಾರ್ಥಿಸಿಕೊಂಡಿದ್ದರೂ ಮುಷ್ಕರ ಯಶಸ್ವಿಯಾಗಿಯೇ ನಡೆಯಿತು. ಅವರ ಮನವಿ ವಿಫಲವೇ ಆಯಿತೆಂದು ಮುಷ್ಕರ ತೋರಿಸಿಕೊಟ್ಟಿತು.

ಕಾರ್ಮಿಕರ ನಿಜವಾದ ಹಿತೈಷಿಯೆಂದು ಹೇಳಿಕೊಳ್ಳುವ 'ಇಂಟಕ್' ನಿಜವಾಗಿಯೂ ಕಾರ್ಮಿಕರ ದ್ರೋಹಿ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿತೆಂದು ಬೆಂಗಳೂರಿನ 'ಇಂಟಕ್' ವಲಯದಲ್ಲಿ ಸ್ವರೂಪ ದರ್ಶನದ ಬಗ್ಗೆ ಕಳವಳ ವ್ಯಕ್ತಪಡಿಸಲಾಯಿತಂತೆ.

० ० ०

ಅಂದ ಹಾಗೆ ಬೆಂಗಳೂರಿನ ವಿಮಾನ ಕಾರ್ಖಾನೆಯ 11 ಸಹಸ್ರ ಜನ ನೌಕರರ ಬಲಿಷ್ಠ ಸಂಘದ ಐಕ್ಯತೆಯನ್ನು ಮುರಿಯಲು 'ಇಂಟಕ್' ಸ್ಥಾಪಿಸಿದ ಪೋಟಿ ಸಂಘವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ.

'ಇಂಟಕ್' ನಿಜವಾಗಿಯೂ ಕಾರ್ಮಿಕ ಹಿತೈಷಿಯೂ ಅಲ್ಲ, ಕಾರ್ಮಿಕರ ಸಂಘವೂ ಅಲ್ಲ, ಕಾರ್ಮಿಕರ ಸಂಘಟನೆಯ ಕಂಟಕವೆಂದು ಬೆಂಗಳೂರಿನ ಕಾರ್ಮಿಕ ವಲಯಗಳಲ್ಲಿ ದೃಢವಾದ ಅಭಿಪ್ರಾಯವನ್ನು ಇದೀಗ ವ್ಯಕ್ತ ಪಡಿಸಿದ ಬಗ್ಗೆ ಖಚಿತ ವರದಿ ನಮ್ಮ ಕೈಸೇರಿದೆ.

० ० ०

ಇಂಟಕ್, ಇಂಟಕ್, ಇಂಟs....(ಕ್)
ಕಂಟಕ ಕಾಂಗ್ರೆಸ್ ಬಂಟs....
ಕಾರ್ಮಿಕ ದ್ರೋಹದ್ ಗಂಟs....
ಕೊನೆಗೆ ತನಗೆ ತಾನೆ—
ಕಂಟಕ, ಕಂಟಕ, ಕಂಟs....(ಕ್)

['ರಾಕ್ ಎನ್ ರೋಲ್' ಮಾದರಿಯಲ್ಲಿ ಕಾರ್ಮಿಕ ಕವಿಗಳೊಬ್ಬರು ರಚಿಸಿದ ಈ ಕೋರಸ್- ಗೀತೆ ಇನ್ನೂ ಎಲ್ಲೂ ಪ್ರಚಾರಕ್ಕೆ ಬಂದಿಲ್ಲವಾದುದರಿಂದ ಇಲ್ಲಿ ಕೃಪೆಯಿಟ್ಟು ಕುರುಕಿಸಲಾಗಿದೆ.]

—"ಚೌಚೌವಾಲಾ"

ಜಾನಪದ ಕತೆ—

ಹಬೀಬಾ

ಹಿಂದಿನ ಕಾಲದ ಚೆಲುವೆಯಾದ ಹಬೀಬಾಳ ವಿಷಯಕ್ಕೆ ನಾನು ತುಂಬಾ ಕೇಳಿದ್ದೆ.

"ಹಬೀಬಾ ಒಲಿದರೆ, ಸತ್ತವರು ಜೀವಂತರಾಗುತ್ತಾರೆ. ಮೊಗ್ಗಿನ ಮೇಲೆ ಹಬೀಬಾ ದೃಷ್ಟಿ ಬೀರಿದರೆ ಅದು ಅರಳುತ್ತದೆ." ಹೀಗೆಂದು ಹಬೀಬಾಳ ವಿಷಯಕ್ಕೆ ಹಳೆಯ ಹಾಡೊಂದು ಹೇಳುತ್ತದೆ.

ಇದೀಗ ನಾನು ಹಬೀಬಾಳ ಅತಿಥಿಯಾಗಿದ್ದೆ. ನನ್ನ ಆತಿಥೇಯ ದಂಪತಿಗಳು ಶತಾಯುಗಳಾಗಿದ್ದರು. ಅವರಿಬ್ಬರೂ ಪರಸ್ಪರರಲ್ಲಿ ನೋಡುತ್ತಿದ್ದಾಗ ಅವರ ಮುಖದ ಮೇಲೆ ತುಂಬ ಮಿಂಚುತ್ತಿದ್ದ ಕಳೆಯನ್ನು ಕಂಡಾಗ ನೋಡಬೇಕಾದ ಅಪೂರ್ವ ವ್ಯಕ್ತಿಗಳಾಗಿ ಕಂಡರವರು.

"ಏ ಸೋದರಿಯೆ, ಚಿಚಿನ್‌ನನ್ನು ನೀನು ಮದುವೆಯಾದುದು ಹೇಗೆ ಎಂಬುದನ್ನು ಹೇಳು" ಎಂದು ಹಬೀಬಾಳ ಸೋದರ ಕೇಳಿದ. ಆದರೆ ಹಬೀಬಾ ತಲೆ ಅಲ್ಲಾಡಿಸಿದಳು. ಅವಳಲ್ಲಿ ನಾಚಿಕೆ ತುಂಬಿಕೊಂಡಿತು.

"ನಿಜವಾಗ್ಲೂ.... ಅದೇನು ಹೇಳುವಂಥದಲ್ಲ."

"ನಿಜವಾಗ್ಲೂ...." ಅವಳ ಸೋದರ ಬಲವಂತಪಡಿಸಿದ "ಹೇಳಲೇ ಬೇಕಾದುದು. ನಮ್ಮ ಅತಿಥಿಗಳಿಗೆ ಅತ್ಯಂತ ಕುತೂಹಲಕಾರಿಯಾದ ಕತೆಯೇ ಸರಿ, ಹೇಳಬೇಕು". ಎಂದು ನಾನೂ ಹೇಳಲೇಬೇಕೆಂದು ಪ್ರತಿಪಾದಿಸಿದೆ.

"ಹಾಗಾದರೆ ಅವನೇ ಹೇಳಲಿ". ಹಬೀಬಾ ಉತ್ತರಿಸಿದಳು. ಪತಿಯ ಹೆಸರನ್ನು ಹೇಳಬಾರದು ಎಂಬ ಸಂಪ್ರದಾಯಕ್ಕನುಸರಿಸಿ ಆಕೆ ಮಾತನಾಡಿದ್ದಳು.

"ಅದೇನೋ ಆತ ಹೊರಗೆ ತುಂಬಾ ಕೆಲಸದಲ್ಲಿ ತೊಡಗಿದ್ದಾನೆ" ಅವಳ ತಮ್ಮ ಉತ್ತರಿಸಿದ.

"ಅದನ್ನೆಲ್ಲ ನಾನು ಹೇಳುವುದು ಸರಿಯಲ್ಲ, ನೀನೆ ಹೇಳು". ಹಬೀಬಾ ಹೇಳಿದಳು. ಸಾತ್‌ಕೆಗೆ ಇನ್ನು ಬಲವಂತ ಅಗತ್ಯವಿಲ್ಲವೆನಿಸಿತು.

"ಹಬೀಬಾಳೊಂದಿಗೆ ಪ್ರೇಮ ಬೆಳಸಿದ ಅನೇಕರಲ್ಲಿ ಝುಗ್‌ದೀದಿಯದ ಎಸ್ತೇತೆಜಿನ್ಯಾ ಒಬ್ಬನಾಗಿದ್ದ." ಆತ ಹೇಳಲಾರಂಭಿಸಿದ:

"ಪಾಣಿಗ್ರಹಣಕ್ಕಾಗಿ ಆತ ಆಕೆಯನ್ನು ಕೇಳಿದ. ಆದರೆ ಆಕೆ ತಿರಸ್ಕರಿಸಿದುದರಿಂದ ಬಲವಂತದಿಂದ ಅವಳ ಮದುವೆ ಮಾಡಿಕೊಳ್ಳಲು ನಿರ್ಧರಿಸಿದ. ಮುಸುಕಿನ ಜೋಳದ ಹೊಲಗಳಲ್ಲಿ ಆಕೆಗಾಗಿ ಕಾಯುತ್ತ ಆತ ಕಾಲ ಕಳೆಯತೊಡಗಿದ. ಆಕೆಯೊಮ್ಮೆ ಅಲ್ಲಿಗೆ ಬಂದಾಗ ತಕ್ಷಣವೇ ಅವಳನ್ನು ಹಿಡಿದುಕೊಂಡು ನೆಲಕ್ಕೆ ಕೆಡವಿ ತನ್ನ ವಶಪಡಿಸಿಕೊಳ್ಳಲೆತ್ನಿಸಿದ. ಇಷ್ಟು ಮಾಡಿದರೆ ಆಕೆ ತನ್ನ ಪತ್ನಿಯಾಗಲು ಒಪ್ಪಿಗೆ ನೀಡುತ್ತಾಳೆ ಎಂದು ಭಾವಿಸಿದ. ಆದರೆ ಹಬೀಬಾ ತುಂಬಾ ಹೊತ್ತು ಅವನೊಡನೆ ಹೋರಾಡಿದಳು. ತನ್ನ ಶಕ್ತಿಗುಂದುತ್ತಿದೆಯೆಂದು ಅವಳಿಗೆ ಅನುಭವವಾದಾಗ ಅವನ ನಡುವಿನಲ್ಲಿದ್ದ ಕತ್ತಿಯನ್ನು ಕಿತ್ತುಕೊಂಡು ಅವನನ್ನೇ ಕೊಂದುಬಿಟ್ಟಳು.

"ಹಬೀಬಾ" ಇದು ಅಬ್‌ಖಾಜಿಯಾದ ಜಾನಪದ ಕತೆ. ಅಬ್‌ಖಾಜಿಯಾವು ಸೋವಿಯತ್ ಸಂಘದ ಸ್ವಾಯತ್ತ ಪ್ರಾಂತ್ಯವಾಗಿದೆ. ಅಲ್ಲಿಯ ಹಳೆಯ ಜನರು ಹೇಳುವ ಈ ಕತೆಗಳನ್ನು ವ್ಯೆಬೀಲ್ ಲೇಕರ್ಬ್ಯಾರವರು ಸಂಗ್ರಹಿಸಿದ್ದಾರೆ.

"ಆ ಮೇಲೆ ಅವಳನ್ನು ನ್ಯಾಯಾಲಯಕ್ಕೆ ವಿಚಾರಣೆಗಾಗಿ ಕರೆತರಲಾಯಿತು. ವಿಚಾರಣೆ ಮುಗಿದ ಬಳಿಕ ಆರು ವರುಷಗಳ ಶಿಕ್ಷೆಯನ್ನು ವಿಧಿಸಿ ಅವಳನ್ನು ಸೈಬೀರಿಯಾಕ್ಕೆ ಗಡೀಪಾರು ಮಾಡಬೇಕೆಂದು ತೀರ್ಪೀಯಲಾಯಿತು.

"ಆದರೆ ಹಠಾತ್ತಾಗಿ ನ್ಯಾಯಾಲಯದ ಒಂದು ಮೂಲೆಯಿಂದ ಎಲ್ಲರಿಗೂ ಸೋಜಿಗವೆನಿಸುವಂತೆ ಪ್ರತಿಭಟನೆಯ ದೊಡ್ಡದೊಂದು ಸ್ವರ ಕೇಳಿತು.

"ಹಬೀಬಾ ಅಪರಾಧಿಯಲ್ಲ ! ಇಸ್ತೇತೆಜಿನ್ಯಾನನ್ನು ನಾನು ಕೊಂದೆ: ನನಗೆ ಶಿಕ್ಷೆ ವಿಧಿಸಿರಿ !"

"ಆಗ ನ್ಯಾಯಾಲಯದಲ್ಲಿ ತುಂಬಾ ಗಲಾಟೆಗಳೇ ನಡೆದುವು".

"ಚಿಚಿನ್ ಕೋಲ್‌ಬಾಯಾ ನ್ಯಾಯಾಲಯದ ಮುಂದೆ ಬಂದು ಹಬೀಬಾ ತನ್ನ ಬಾಲ್ಯದ ಸ್ನೇಹಿತಳೆಂದೂ ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಇಚ್ಚಿಸಿದ್ದಳೆಂದು ಆತ್ಮರಕ್ಷಣೆಗಾಗಿ ಇಸ್ತೇತೆಯನ್ನು ಕೊಂದೆನೆಂದು ಹೇಳಿದರೆ ಬಿಡುಗಡೆ ಮಾಡುವರೆಂದೂ ಭಾವಿಸಿ ಹಾಗೆ ಹೇಳಿದ್ದಾಳೆ".

ಚುಟುಕ—ಚುರುಕ

ಜಾತಿಗಾರ

ಚಣಕೆ ಹೊಸ
ವರ್ಣ—ವೇಷ
ಧರಿಸಿ ಮೆರೆವ ಚದುರ.
ಗುಲ್ಲು—ಗೌಜು
ಒಳ್ಳೆ ಮೋಜು
ಎನುವ ಜಾತಿ—ಗಾರ

—ಎಂ. ಅಕಬರ್ ಅಲ್ಲಿ

ಹಸ್ತಕ್ಷೇಪ, ಯುದ್ಧಸಿದ್ಧತೆಗಳು ನಿಲ್ಲಲಿ

ಜನ ತಮ್ಮ ಪಾಡಿಗೆ ತಾವು ಶಾಂತಿಯಿಂದ ಬದುಕಲವಕಾಶ ಕೊಡಿ!

ಎಪ್ಪತ್ತು ದೇಶಗಳಿಂದ ಒಂದು ಸಹಸ್ರ ಜನ ಶಾಂತಿ-ಪ್ರತಿಪಾದಕ ಪ್ರತಿನಿಧಿಗಳು ಸ್ಟಾಕ್‌ಹೋಮ್‌ನಲ್ಲಿ ಸೇರುತ್ತಿರುವ ಹಾಗೆಯೇ ಲೆಬನಾನಿನಲ್ಲಿ ಅಮೇರಿಕನ್ ಡಾಲರ್‌ಶಾಹಿಯ ಅಕ್ರಮಣದ ವಾರ್ತೆಯೂ ಬಂತು. ಅಂತರರಾಷ್ಟ್ರೀಯ ಸಹಕಾರ, ನಿರಾಯುಧೀಕರಣ, ಮತ್ತು ಪ್ರಪಂಚ ಶಾಂತಿ ಉದ್ದೇಶಗಳನ್ನು ಅಣಕಿಸುವಂತೆ ಅಮೇರಿಕೆಯ ಹಾಗೂ ಬ್ರಿಟಾನಿನ ಅಕ್ರಮಣ ನಡೆಯಿತು. ಮಾನವನಿಗೆ ಬೇಕಾಗಿರುವ ಶಾಂತಿ ಸ್ಥಾಪನೆಗೆ ಸೇರಿದ ಪ್ರತಿನಿಧಿಗಳು ತೀವ್ರವಾಗಿಯೇ ಲೆಬನಾನ್‌ನಲ್ಲಿಯ ಹಸ್ತಕ್ಷೇಪವನ್ನು ಖಂಡಿಸಿದರು.

ಸ್ಟಾಕ್‌ಹೋಮ್ ಶಾಂತಿ ಅಧಿವೇಶನವು ಗೊತ್ತುವಳಿಯೊಂದನ್ನು ಸ್ವೀಕರಿಸುತ್ತ, ಅಮೇರಿಕೆಯ ಕ್ರಮವು "ಮಧ್ಯಪ್ರಾಚ್ಯದ್ದಷ್ಟೇ ಅಲ್ಲ, ಇಡೀ ಪ್ರಪಂಚದ ಶಾಂತಿಗೇ ಅಪಾಯವನ್ನೊಡ್ಡಿದ ದುರಾಕ್ರಮಣವಾಗಿದೆ" ಎಂದು ಹೇಳಿತು. ಲೆಬನಾನ್‌ನಲ್ಲಾದ ಅಮೇರಿಕೆಯ ಹಸ್ತಕ್ಷೇಪವನ್ನು ಇನ್ನೂ ಕಟುವಾದ ಶಬ್ದಗಳಲ್ಲಿ ಖಂಡಿಸಬೇಕಾಗಿತ್ತು ಎಂಬುದು ಅನೇಕ ಭಾರತೀಯ ಪ್ರತಿನಿಧಿಗಳ ಅಭಿಪ್ರಾಯವಾಗಿತ್ತು.



ವಿಶ್ವಶಾಂತಿ ಚಳವಳಿಯ ಪ್ರತೀಕ—ಪಾರಿವಾಳ

ಭಾರತೀಯ ಪ್ರತಿನಿಧಿಗಳ ಧುರೀಣೆಯಾ ಶ್ರೀಮತಿ ರಾಮೇಶ್ವರೀ ನೆಹ್ರೂರವರು ಲೆಬನಾನ್ ಮತ್ತು ಇರಾಕ್ ಜನತೆಗೆ ನಮ್ಮ ಬೆಂಬಲವಿದೆಯೆಂದು ಸಾರಿದಾಗ ಇಡೀ ಪ್ರತಿನಿಧಿ ಸಮೂಹವೇ ದೀರ್ಘಕಾಲದ ಕರತಾಡನದಿಂದ ಇದನ್ನು ಸ್ವಾಗತಿಸಿತು. "ಅರಬ್ ರಾಷ್ಟ್ರಗಳ ಒಳವ್ಯವಹಾರದಲ್ಲಿ ಈಗ ಪ್ರವೇಶಿಸುತ್ತಿರುವವರು ತಕ್ಷಣವೇ ತಮ್ಮ ಸೈನ್ಯಗಳನ್ನು ವಾಪಸ್ಸು ತೆಗೆದುಕೊಳ್ಳಲಿ. ಈ ಕರೆ ಈ ಅಧಿವೇಶನದಿಂದಲೇ ಹೋಗಲಿ" ಎಂದೂ ಶ್ರೀಮತಿ ರಾಮೇಶ್ವರಿ ನೆಹ್ರೂ ಕರೆಯಿತ್ತರು.

ಏಷ್ಯಾ—ಆಫ್ರಿಕಾಗಳ ಐಕ್ಯತಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ಯುಸೂಫ್ ಎಲ್. ಸಬಾಯಿ ಅವರು "ನಾವು ಸ್ವತಂತ್ರ ಏಷ್ಯಾ—ಆಫ್ರಿಕಾಗಳ ಜನತೆಗಳ ಸಮೂಹಕ್ಕೆ ಈ ಇರಾಕ್ ಜನತೆಯನ್ನು ಸ್ವಾಗತಿಸುತ್ತೇವೆ." ಎಂದು ಘೋಷಿಸಿದಾಗ ಒಂದೇ ಸಮನೆ ಕರತಾಡನಗಳು ಕೇಳಿಬರುತ್ತಿದ್ದವು.

ಪ್ರಪಂಚ ಶಾಂತಿ ಸಮಿತಿಯ ಅಧ್ಯಕ್ಷರಾದ ಪ್ರೊ। ಜೋಲಿಯೊ ಕ್ಯೂರಿ ಅವರು ತಮ್ಮ ಆರಂಭೋತ್ಸವ ಭಾಷಣದಲ್ಲಿ "ಅಶಾಂತಿಯ ಸಮತೋಲ"ದ ತತ್ವಜ್ಞಾನವನ್ನು ಕಟುವಾಗಿ ಖಂಡಿಸಿದರು. "ರಾಡಾರ್ ಸಮೀಕ್ಷೆಯಲ್ಲಿಯ ಒಂದು ಕ್ಷುಲ್ಲಕ ತಪ್ಪಿನಿಂದ ಕೂಡ ನ್ಯೂಕ್ಲಿಯರ್ ಸಿಡಿತದ ಸಮರವೇ ಆರಂಭವಾಗಬಹುದು." ಎಂದು ಮಾರಣಾಸ್ತ್ರಗಳಿಂದುಂಟಾದ ಇಂದಿನ ಘೋರ ಪರಿಸ್ಥಿತಿಯ ನಿವಾರಣೆಗೆ ಸಲಹೆಯೀಯುತ್ತ "ಅಂತರ್ರಾಷ್ಟ್ರೀಯ ಸಹಕಾರ ಮತ್ತು ನಿರಾಯುಧೀಕರಣಗಳನ್ನು ಸಾಧಿಸಲು ಪ್ರಪಂಚದ ಶಾಂತಿ ಶಕ್ತಿಗಳೆಲ್ಲ ಒಂದೆಡೆ ಸೇರಿಸಿ ಅಂತರ್ರಾಷ್ಟ್ರೀಯ

ಸ್ಟಾಕ್‌ಹೋಂ ಮಹಾಧಿವೇಶನದ ಕರೆ

ಸಮಿತಿಯೊಂದನ್ನು ರಚಿಸುವದು ಅಗತ್ಯವಿದೆ" ಎಂದು ತಿಳುಹಿಸಿದರು.

ಬ್ರಿಟಾನಿನ ಖ್ಯಾತ ವಿಜ್ಞಾನಿ ನಿರಾಯುಧೀಕರಣದ ಬಗ್ಗೆ ಇರುವ ತಮ್ಮ ಅಭಿಪ್ರಾಯಗಳ ವಿಶೇಷ ವರದಿಯನ್ನರ್ಪಿಸಿದರು.

ಯೂರೋಪಿಯನ್ ನಗರವೊಂದರಲ್ಲಿ ಈ ಮಹಾ ಅಧಿವೇಶನ ನಡೆಯುತ್ತಿದ್ದರೂ ಅಧಿವೇಶನಕ್ಕೆ ಬಂದ ಅರ್ಧ ಪ್ರತಿನಿಧಿಗಳಲ್ಲಿ ಆಫ್ರಿಕಾ, ಏಷಿಯಾ ಮತ್ತು ಅಮೇರಿಕಾ ದೇಶಗಳವರೇ ಇದ್ದರು. ಅತ್ಯಂತ ಅಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ಕಳುಸಿದ ದೇಶವೆಂದರೆ ಪಶ್ಚಿಮ ಜರ್ಮನಿಯಾಗಿತ್ತು. ಅಲ್ಲಿಂದ ೧೨೦ ಜನ ಶಾಂತಿ ಪ್ರತಿನಿಧಿಗಳು ಆಗಮಿಸಿದ್ದರು. ಭಾರತವು ೭೭ ಜನ ಪ್ರತಿನಿಧಿಗಳಿಂದ ಪ್ರತಿನಿಧಿಸಲ್ಪಟ್ಟಿತ್ತು. ಭಾರತೀಯ ಮಹಿಳೆಯರ ಸೀರೆಗಳೂ ಸಿಖ್ಖರ ಟರ್ಬನ್‌ಗಳೂ ಅಧಿವೇಶನ ಮಂಟಪದಲ್ಲಿ ಬಹುಸಂಖ್ಯಾತರ ಆಕರ್ಷಣೆಯ ಕೇಂದ್ರಗಳಾಗಿದ್ದವು.

"ಮಾನವ ಚರಿತ್ರೆಯಲ್ಲೆ ಅನಿರೀಕ್ಷಿತವಾದ ಅಭದ್ರ ಸ್ಥಿತಿ ಇಂದು ಉಂಟಾಗಿದೆ" ಎಂಬುದಾಗಿ ಭಾರತ ಪ್ರತಿನಿಧಿ ಮಂಡಳದ ಧುರೀಣೆಯಾದ ಶ್ರೀಮತಿ ರಾಮೇಶ್ವರಿ ನೆಹ್ರೂ ಅವರು ಸ್ಟಾಕ್‌ಹೋಮ್ ಶಾಂತಿ ಸಮ್ಮೇಳನದ ಆರಂಭಿಕ ಅಧಿವೇಶನದ ಭಾಷಣ ಮಾಡುತ್ತಾ ತಿಳಿಸಿದರು.

"ರಾಷ್ಟ್ರ ರಾಷ್ಟ್ರಗಳಲ್ಲಿ ಎಂದೆಂದೂ ಇಷ್ಟು ಭೀಷಣವಾದ ಬಿಕ್ಕಟ್ಟು ಎಂದೂ ತೋರಿರಲಿಲ್ಲ" ಎಂದು ಹೇಳಿದ ಶ್ರೀಮತಿ ನೆಹ್ರೂ ಯುದ್ಧ ಸಂಧಾನಗಳನ್ನೂ, ಸೈನಿಕ ನೆಲೆಗಳನ್ನೂ ಖಂಡಿಸುತ್ತ "ರಾಷ್ಟ್ರ ರಾಷ್ಟ್ರಗಳಲ್ಲಿಯ ನಿರುಪದ್ರವಿ ಜನಗಳು ಕಷ್ಟಪಟ್ಟು ಸಂಪಾದಿಸಿದ ಹಣವೆಲ್ಲ ಇಂದು ಪ್ರತಿಯೊಂದು ಸಣ್ಣ ಕುಟುಂಬಕ್ಕೂ ಸಂಕಟವನ್ನು ತಂದೊಡ್ಡುವಂಥ ಶಸ್ತ್ರಾಸ್ತ್ರ ಸ್ಪರ್ಧೆಗೆ ವಿನಿಯೋಗಿಸಲ್ಪಡುತ್ತಿದೆ" ಎಂದರು.

"ಜನಗಳಿಗೆ ಯುದ್ಧವೂ ಬೇಕಾಗಿಲ್ಲ, ಯುದ್ಧ ಸಿದ್ಧತೆಯೂ ಬೇಡ. ಇನ್ನೊಬ್ಬರ ಹಸ್ತಕ್ಷೇಪವಿಲ್ಲದೆ ತಮ್ಮ ಮನೆಗಳಲ್ಲಿ ತಾವು ಶಾಂತಿಯಲ್ಲಿರುವುದು ಅವರಿಗೆ ಬೇಕಾಗಿದೆ" ಎಂಬುದಾಗಿ ಶ್ರೀಮತಿ ನೆಹ್ರೂ ಘೋಷಿಸಿದರು.

ಸಂ. ರಾ. ಸಂಘದ ಸ್ಥಾನ

ಇಂದಿನ ಪ್ರಪಂಚದಲ್ಲಿ ಸಂಯುಕ್ತರಾಷ್ಟ್ರ ಸಂಘದ ಸ್ಥಾನಮಾನದ ಬಗ್ಗೆ ಮಾತನಾಡುತ್ತ "ಸಂಯುಕ್ತ ರಾಷ್ಟ್ರ ಸಂಘವು ತನ್ನ ಕಾರ್ಯದಿಂದ ಒಂದಕ್ಕಿಂತ ಹೆಚ್ಚುಸಲ ಯುದ್ಧ ಭೀತಿಯಿಂದ ಜನತೆಯನ್ನು ರಕ್ಷಿಸಿದೆ. ಆದರೆ ಸಂ. ರಾ. ಸಂಘದಿಂದ ನಿರೀಕ್ಷಿತ ಕಾರ್ಯ ಆಗಬೇಕಾದಷ್ಟು ಈ ವರೆಗೂ ಆಗದಿರುವುದು ಶೋಚನೀಯ. **ಪ್ರಪಂಚದ ಒಂದನೆಯ ಐದು ಭಾಗ ಜನವಾಸಿಸುವ ಮಹಾದೇಶ ಚೀನಿ ಪ್ರಜಾರಾಜ್ಯವನ್ನು ಸಂ. ರಾ. ಸಂಘದ ಸದಸ್ಯತ್ವದಿಂದ ಹೊರಗಿಟ್ಟಿರುವುದು ಸಂ. ರಾ. ಸಂಘವನ್ನು ದುರ್ಬಲಗೊಳಿಸಿದಂತಾಗಿದೆಯಲ್ಲದೆ, ಅದರ** ಪ್ರಯೋಜನವನ್ನು ಕಡಮೆ ಮಾಡಿದಂತಾಗಿದೆ" ಎಂಬುದಾಗಿ ಹೇಳಿದರು. ಅವರು ಮುಂದೊರೆದು ಮಾತನಾಡುತ್ತ ಹೀಗೆ ಹೇಳಿದರು:



"ಅಣು ಸಮರದಿಂದ ನಮ್ಮ ಶಿಶುಗಳನ್ನು ರಕ್ಷಿಸಿ"

ಸಂಯುಕ್ತ ರಾಷ್ಟ್ರ ಸಂಘ ನಿಶ್ಯಕ್ತವಾಗುತ್ತಿದೆ

ಬಲಾಢ್ಯ ರಾಷ್ಟ್ರವೊಂದರ ಸ್ವಾರ್ಥ ಸಂ. ರಾ. ಸಂಘವು ನಿಶ್ಯಕ್ತವಾಗುವುದಕ್ಕೂ ಅದರ ನಿರ್ಧಾರಗಳು ಕಾರ್ಯಗತವಾಗದಿರುವದಕ್ಕೂ ಕಾರಣವಾಗುತ್ತದೆ. ಯಾಕೆಂದರೆ ಸೈನಿಕ ಸಂಧಾನಗಳು, ಸೈನಿಕ ನೆಲೆಗಳ ಸ್ಥಾಪನೆ ಇಂದಿನ ಅಂತರ್ರಾಷ್ಟ್ರೀಯ ಜೀವನದ ಪ್ರಮುಖ ಲಕ್ಷಣಗಳಾಗಿವೆ. ಅದಕ್ಕಾಗಿಯೇ ನ್ಯೂಕ್ಲಿಯರ್ ಸಿಡಿತದ ಪ್ರಯೋಗಗಳೂ ನಡೆಯುತ್ತಿವೆ. ಶಸ್ತ್ರಾಸ್ತ್ರಗಳ ಕುಪ್ಪೆಯನ್ನೇ ಒಟ್ಟಲಾಗುತ್ತಿದೆ, ಇದರಿಂದಾಗಿ ಮಾನವ ಕುಲವನ್ನೇ ಅಪಾಯಕ್ಕೀಡು ಮಾಡಲಾಗುತ್ತಿದೆ. ಈ ಕಾರಣಗಳಿಂದ ಶೃಂಗ ಸಮ್ಮೇಲನವನ್ನು ಸೇರಿಸಲು ಕೂಡ ವಿಲಂಬವಾಗುತ್ತಿದೆ.

(೬ನೇ ಪುಟ ನೋಡಿ)

ನೀವೇನು ಹೇಳುತ್ತೀರಿ ?

ಯಾರ ದಿವಾಳಿ ?

ಮೈಸೂರು ರಾಜ್ಯದ ಆಡಳಿತ ಸುಧಾರಣೆಗಾಗಿ ಶ್ರೀ ಎ. ಡಿ. ಗೋರ್‍ವಾಲಾರವರು ಒಪ್ಪಿಸಿದ ವರದಿಯ ಕೆಲ ಅಂಶಗಳನ್ನು ಕೊಡಲಾಗಿದೆ:

''ಆರ್ಥಿಕ ಔಚಿತ್ಯವನ್ನು ಮೀರುವುದು ದುಂದು ವೆಚ್ಚದ ಸ್ಪಷ್ಟ ಲಕ್ಷಣಗಳಲ್ಲೊಂದು....

''ಮೈಸೂರು ಸರ್ಕಾರದ ಆತಿಥಿ ಸತ್ಕಾರದ ಎಲ್ಲ ಏರ್ಪಾಟುಗಳೂ ದುಂದು ವೆಚ್ಚದ ವ್ಯಾಪ್ತಿಯೊಳಗೇ ಇವೆ. ....ಸಾರ್ವಜನಿಕ ವೆಚ್ಚದಲ್ಲಿ ಸಚಿವರು ನೀಡುವ ಸತ್ಕಾರಗಳ ಸಂಖ್ಯೆಯನ್ನು ಕಂಡು ವಿಸ್ಮಯವಾಗುವುದು....

''....ಅತಿಥಿಗಳನ್ನು ಸತ್ಕರಿಸುವದರಿಂದ ಮಂತ್ರಿಮಂಡಲಕ್ಕೂ ಪ್ರಾಯಶಃ ತೃಪ್ತಿಯುಂಟಾಗಬಹುದು. ಆದರೆ ಇದರ ವೆಚ್ಚವನ್ನು ಪೂರೈಸುವವರು ಯಾರು? ಅಥವಾ ಮುಂಬೈನ ಮಾತಿನಲ್ಲಿ ಹೇಳುವದಾದರೆ ''ಇದು ಯಾರ ಅಪ್ಪನ ದಿವಾಳಿ ?" (ದಿವಾಳಿ= ದೀಪಾವಳಿ) ಖಂಡಿತವಾಗಿಯೂ ಇದು ಸಾಮಾನ್ಯ ಪ್ರಜೆಯ ಅಪ್ಪನ ದಿವಾಳಿಯಲ್ಲ. ಹಾಗಿದ್ದಲ್ಲಿ ಆತನೇಕೆ ಈ ವೆಚ್ಚವನ್ನು ಪೂರೈಸಬೇಕು? ಬೆಂಗಳೂರಿನಂತಹ ನಗರದಲ್ಲಿ ಬೇಕಾದಷ್ಟು ಹೋಟೆಲುಗಳಿವೆ. ಉನ್ನತ ಗಣ್ಯವ್ಯಕ್ತಿಗಳು ಸಾಮಾನ್ಯ ಜನರಂತೆ ಅವುಗಳಲ್ಲಿಯೇ ಯಾಕೆ ತಂಗಬಾರದು ?

"....ಈ ಧರ್ಮಾರ್ಥ ಆತಿಥ್ಯ ಇನ್ನಾದರೂ ನಿಲ್ಲಬೇಕು.

ಬಾಕಿದಾರರು ?

''....ಆತಿಥ್ಯದ ಏರ್ಪಾಟಿನಲ್ಲಿ ಬಹು ಅತೃಪ್ತಿಕರ ಪರಿಸ್ಥಿತಿಯೇನಂದರೆ ವಿಧಾನ ಮಂಡಲದ ಅನೇಕ ಸದಸ್ಯರು ತಮ್ಮ ಬಾಬ್ತು ಹಣದ ಬಾಕಿಯನ್ನು ಉಳಿಸಿಕೊಂಡಿರುವುದು. ಈ ಪಟ್ಟಿಯಲ್ಲಿ 54 ಸದಸ್ಯರ ಹೆಸರುಗಳಿದ್ದು, ಅವರೆಲ್ಲರಿಂದ ಒಟ್ಟು 10,065·20 ರೂ.ಗಳು ಬರಬೇಕಾಗಿದೆ. ಆ ಪೈಕಿ ಇಬ್ಬರು ಉಪಸಚಿವರು ಅತಿ ಹೆಚ್ಚಿನ ಬಾಕಿಯನ್ನು ಕೊಡಬೇಕಾಗಿದೆ. ಅವರುಗಳಿಂದ ಕ್ರಮವಾಗಿ 4,652 ರೂ. ಮತ್ತು 2,348 ರೂ. ಬಾಕಿ ಬರಬೇಕಾಗಿದೆ. ಅದಕ್ಕಿಂತ....ಕಡಮೆಯಾದ ಬಾಕಿಯೆಂದರೆ ಮಾಜಿ ಸಚಿವರೊಬ್ಬರು ಕೊಡಬೇಕಾಗಿರುವ 640·30 ರೂ.ಗಳು...."

"ಶುದ್ಧ ದರೋಡೆ"

ಭೋಪಾಲ್‌ಸಾಗರ ವಿವಿಧೋದ್ದೇಶ ಸಹಕಾರಿ ಸಂಘದ ದರೋಡೆ ಕತೆಯೊಂದು ಇಲ್ಲಿದೆ. ರಾಜಸ್ಥಾನದಲ್ಲಿರುವ ಈ ಪ್ರಮುಖ ಸೊಸೈಟಿಯ ಅಧ್ಯಕ್ಷರು ಕಾಂಗ್ರೆಸ್ ಎಂ.ಎಲ್.ಎ. ಆದ ಶ್ರೀ ಹರಿಪ್ರಸಾದ ಯಾದವ ಅವರು. ಈಗ ನಾಲ್ಕು ವರುಷಗಳಿಂದಲೂ ಅವರೇ ಅಧ್ಯಕ್ಷರಾಗಿದ್ದಾರೆ.

ಕೆಳಗೆ ಕೊಟ್ಟ ಸತ್ಯಸಂಗತಿಗಳು ಸರಕಾರಿ ಆಡಿಟರ್ ಕೇಸರೀಸಿಂಗ್ ಅವರು ನಡೆಸಿದ ಲೆಕ್ಕತಪಾಸಣೆಯ ವರದಿಯಿಂದಲೇ ಕೊಟ್ಟವುಗಳಾಗಿವೆ.

- ಸದಸ್ಯತ್ವದ ಎಲ್ಲಾ ಅರ್ಜಿ ಫಾರ್ಮ್‌ಗಳ ಮೇಲೂ ಒಂದೇ ಹೆಬ್ಬೆರಳಿನ ಗುರುತುಗಳಿವೆ. (ದಸ್ಕತ್ತುಗಳು).
- ಈ ಅರ್ಜಿಗಳಿಗೆ ಸಾಕ್ಷಿದಾರರಾಗಿರುವವರು ಹೆಚ್ಚಾಗಿ ಶ್ರೀ ಹರಿಪ್ರಸಾದ ಯಾದವ್ ಅಥವಾ ಅವರ ಸಂಬಂಧಿ, ಕೃಷ್ಣಲಾಲ್ ಯಾದವ್ ಅಥವಾ ಸಂಘದ ಕಾರ್ಯದರ್ಶಿ ತೇಜ್‌ಸಿಂಗ್ ಇವರುಗಳೇ.
- ಕೆಲವು ಅರ್ಜಿಗಳಲ್ಲಿ ಹೆಬ್ಬೆರಳಿನ ಗುರುತುಗಳು ಮಾತ್ರ ಇವೆ. ಆದರೆ ಅವು ಯಾರ ಹೆಬ್ಬೆರಳೆಂಬುದಕ್ಕೇನೂ ಅಲ್ಲಿ ಬರೆಯಲ್ಪಟ್ಟಿಲ್ಲ.
- ಒಬ್ಬನ ರುಜು ಒಂದೊಂದು ಕಡೆ ಒಂದೊಂದು ಬಗೆಯಾಗಿದೆ, ಒಬ್ಬನೇ ಕೆಲವು ಕಡೆಗೆ ರುಜು ಹಾಕಿದ್ದಾನೆ, ಕೆಲವೆಡೆ ಹೆಬ್ಬೆರಳನ್ನೊತ್ತಿದ್ದಾನೆ.
- ನಿಯಮಾವಳಿಗೆ ವಿರೋಧವಾಗಿ ಸುಮಾರು ರೂ. 2,000ಗಳನ್ನು ಸಾಲವಾಗಿ ಕೊಡಲಾಗಿದೆ.
- ಶೇರು ಬಂಡವಾಳ ರೂಪಾಯಿ 5,000ಕ್ಕೆ ಹೆಚ್ಚಾಗಿರ ಕೂಡದೆಂಬ ನಿಬಂ

(೯ನೇ ಪುಟ ನೋಡಿ)

ಬಿಜಾಪುರ—

ಮಹಾಪೂರದಿಂದಾಗಿ ಸಂಚಾರ ಬಂದಾಗಿದೆ

— ಸರಕಾರದ ದುರ್ಲಕ್ಷ್ಯವೇ ಇದಕ್ಕೆ ಕಾರಣ —

ಬಿಜಾಪುರ ಜಿಲ್ಲೆಯಲ್ಲಿ ಮಳೆಯಾಗದಿದ್ದರೂ ಕೂಡ ಸತಾರಾ, ಬೆಳಗಾವಿ, ಜತ್ತ ಮೊದಲಾದ ಕಡೆಗಳಲ್ಲಿ ಅತಿವೃಷ್ಟಿಯಾದದರೆ, ಬಿಜಾಪುರ ಜಿಲ್ಲೆಯ ಐದು ನದಿಗಳು, ಕೆಂಪು ನೀರಿನಿಂದ ತುಂಬಿ ಹರಿಯುವುದಷ್ಟೇ ಅಲ್ಲ, ನದಿದಂಡೆಗಿರುವ ಹಲವಾರು ಹಳ್ಳಿಗಳನ್ನೂ, ಸಾವಿರಾರು ಎಕ್ರೆ ಭೂಮಿಯನ್ನೂ ನೀರಲ್ಲಿ ಮುಳುಗುವಂತೆ ಮಾಡಿ, ಪ್ರತಿ ವರ್ಷ ರೈತರಿಗೆ ಲಕ್ಷಾವಧಿ ರೂಪಾಯಿಯ ಹಾನಿಯನ್ನುಂಟು ಮಾಡುತ್ತವೆ. ಈ ರೀತಿ ಹೊಳೆಗಳು ತುಂಬಿ ಬರುವುದರಿಂದ ಬಿಜಾಪುರ ಜಿಲ್ಲೆಯಲ್ಲಿಯ ವಾಹನಸಂಚಾರ ಬಂದಾಗುವುದಷ್ಟೆ ಅಲ್ಲ, ಬೇರೆ ಜಿಲ್ಲೆಗಳಿಗೆ ಹೋಗುವ ವಾಹನಗಳಿಲ್ಲ ತಡೆಹಿಡಿಯಲ್ಪಡುತ್ತವೆ. ಹದಿನೈದು ದಿಗಲ್ಲಿ ನದಿಯ ನೀರು ಇಳಿಮುಖವಾಗದೆ ನಾಗರಿಕರಿಗೂ, ವ್ಯಾಪಾರಸ್ಥರಿಗೂ ಬಹಳ ಅಡೆತಡೆಯಾಗುತ್ತದೆ. ಈ ನದಿಗಳೆಲ್ಲ ತುಂಬಿ ಬಂದರೆ, ಬಿಜಾಪುರ ಜಿಲ್ಲೆಯಲ್ಲಿಯ ಹಳ್ಳಿಗಳ ಸಂಪರ್ಕ ಸಂಪೂರ್ಣ ಬಂದಾಗುತ್ತದೆ. ಹಳ್ಳಿಗಳಲ್ಲಿ ಜನರಿಗೆ ಅವಶ್ಯ ಕೆಲಸವಿದ್ದರೆ, ಸರಕಾರಿ ಅಧಿಕಾರಿಗಳಿಗೆ ಮತ್ತು ಪೋಲೀಸರಿಗೆ ಅರ್ಜಂಟ ಕೆಲಸದ ಸಲುವಾಗಿ ಹಳ್ಳಿಗಳಿಗೆ ಹೋಗುವುದೇ ಅಸಾಧ್ಯವಾತ್ತದೆ. ಡೋಣಿ ನದಿಯಿಂದಾಗಿ ಬಾಗೇವಾಡಿ, ಜಮಖಂಡಿ, ಬೆಳಗಾವಿ ರಸ್ತೆಯೂ, ಕೃಷ್ಣಾನದಿಗೆ ಕೋಲಾರದ ಹತ್ತರ ಪೂಲು ಇಲ್ಲದಿರುವುದರಿಂದ ಬಿಜಾಪುರ ಬಾಗಲಕೋಟೆ ರಸ್ತೆಯಲ್ಲದೆ ಧಾರವಾಡ, ಬೆಳಗಾವಿ ಬೆಂಗಳೂರು ರಸ್ತೆಯೂ, ಘಟಪ್ರಭಾದಿಂದಾಗಿ ಅನಗವಾಡಿಯ ರಸ್ತೆಯೂ, ಮಲಪ್ರಭದಿಂದಾಗಿ, ಬಾಗಲಕೋಟ, ಹುನಗುಂದ, ಧಾರವಾಡ, ಬಾದಾಮಿ, ಚೋಳಚಗುಡ್ಡ ರಸ್ತೆಯೂ, ಕೃಷ್ಣಾ ನದಿಯಿಂದಾಗಿ ದಾನೂರ–ತಂಗಡಗಿಯ ಹತ್ತಿರ ಬೆಂಗಳೂರು, ಶೋಲಾಪುರ ಮತ್ತು ರಾಯಚೂರು ರಸ್ತೆಯೂ ಬಂದಾಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಒಂದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕೃಷ್ಣಾ (ಚಿಕ್ಕ ಪಡಸಲಗಿ) ಮತ್ತು ಭೀಮಾ ನದಿಗೆ ಎರಡು ಸೇತುವೆ ಕಟ್ಟಲಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವದೇ ಕೆಲಸ ಕೈಗೊಂಡಿಲ್ಲ. ಮತ್ತು ಮೈಸೂರು ಸರಕಾರದವರು ಯಾವದೇ ಕೆಲಸ ಮಾಡುವಂತೆ ಕಂಡುಬರುವುದಿಲ್ಲ.

ಕೋಲಾರ, ಅನಗವಾಡಿ, ಧಾನೂರ ಮೊದಲಾದ ಕಡೆಗಳಲ್ಲೆಲ್ಲ, ನದಿಗಳಿಗೆ ಪೂಲುಗಳನ್ನು ಕಟ್ಟಿ, ಜಿಲ್ಲೆಯ ಜನರಿಗೆ ಅತ್ಯಾವಶ್ಯಕವಾದ ವಾಹತುಕ ಸದಾಕಾಲ ನಡೆಯುವಂತೆ ಮಾಡುವುದು ಸರಕಾರದ ಕರ್ತವ್ಯವಿರುತ್ತದೆ. ಜಿಲ್ಲೆಯಿಂದ ಆರಿಸಿ ಬಂದಿರುವ ಕಾಂಗ್ರೆಸ ಮತ್ತು ಇತರ ಎಂ. ಎಲ್. ಎ ಜನರೂ ಈ ಮಹತ್ವದ ವಿಷಯದ ಕುರಿತು ಚಕಾರ ಎತ್ತುವುದಿಲ್ಲ. ಜಿಲ್ಲೆಯ ನದಿಗಳಿಗೆ ಪೂಲು ಕಟ್ಟಿಸುವ ಕೆಲಸವನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಕೊಳ್ಳಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯು ಸರಕಾರಕ್ಕೆ ಮನವಿಯನ್ನರ್ಪಿಸಿದೆ. ಜಿಲ್ಲೆಯ ಜನತೆ ಸರಕಾರಕ್ಕೆ ಒತ್ತಾಯ ಮಾಡಿ ಈ ಕೆಲಸ ತೀವ್ರ ಕೈಗೊಳ್ಳುವಂತೆ ಮಾಡಬೇಕು.

ನದಿಗಳಿಗೆ ಮಹಾಪೂರ ಬಂದಿದ್ದರೂ, ಇಂಡಿ, ಸಿಂದಗಿ ಮೊದಲಾದ ತಾಲೂಕುಗಳಿಗೆ ಮಳೆಯಿಲ್ಲದೆ ಒಕ್ಕಲಿಗರು ಕಂಗಾಲಾಗಿರುವರು. ಮುಂಗಾರಿ ಬೆಳೆಯಂತೂ ಹಾಳಾಗಿ ಹೋಯಿತು. ಹಿಂಗಾರಿ ಬೆಳೆಯೂ ತಪ್ಪಿ ಜಿಲ್ಲೆಯ ಕೆಲವು ಭಾಗದಲ್ಲಿ ದುಷ್ಕಾಳ ಉಂಟಾಗುವ ಭಯವಿದೆ. ಈಗಾಗಲೇ ಜೋಳದ ಧಾರಣೆ ಏರಿದೆ. ಮಣ ಒಂದಕ್ಕೆ ರೂ. 10 ಇದ್ದದ್ದು ರೂ. 12 ಆಗಿದೆ. ಬೇಳೆ ಮತ್ತು ಇತರ ಕಾಳುಗಳ ಧಾರಣೆಯೂ ಹೆಚ್ಚಾಗಿದೆ.

ಸರಕಾರದವರು ಕೂಡಲೇ ಬರಗಾಲ ಕಾಮಗಿರಿಗಳನ್ನು ಕೈಗೊಳ್ಳಬೇಕು ಮತ್ತು ದುಷ್ಕಾಳ ಪೀಡಿತ ಹಳ್ಳಿಗಳಲ್ಲಿ ಅಗ್ಗ ಕಾಳಿನ ಅಂಗಡಿಗಳನ್ನು ತೆಗೆಯಬೇಕು.

ಕಾಂಗ್ರೆಸ್ಸಿಗೆ ಲಿಂಗಬಸಯ್ಯನವರ

ರಾಜೀನಾಮೆ !

ಬಾದಾಮಿ ತಾಲೂಕಿನ (ಬಿಜಾಪುರ ಜಿಲ್ಲೆ) ಎಂಡಿಗೇರಿ ಗ್ರಾಮದ, ಹಿರಿಯ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಬಸಯ್ಯಾ ಓಂಕಾರಯ್ಯಾ ಹಿರೇಮಠ ಎಂಬ ಜನಪ್ರಿಯ ಸ್ವಾಮಿಯವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು, ರೈತ ಸಂಘಟನೆಯ ಕೆಲಸದಲ್ಲಿ ತೊಡಗಿದ್ದಾರೆ.

ಇವರು ಜಿಲ್ಲಾ ಕಾಂಗ್ರೆಸ ಸಮಿತಿಗಿತ್ತ ರಾಜೀನಾಮೆ ಪತ್ರದಲ್ಲಿ ಈ ರೀತಿ ಬರೆದಿದ್ದಾರೆ:—

ನಾನು 1936ರಿಂದ ಕಾಂಗ್ರೆಸಿನಲ್ಲಿ ದುಡಿದು, ಮದ್ಯಪಾನ ಪ್ರತಿಬಂಧ ಮತ್ತು ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದೆ. 1942ರ ಚಲೇಜಾವ ಚಳವಳಿಯಲ್ಲಿ ಏಳೂವರೆ ವರ್ಷ ಶಿಕ್ಷೆಯಾಗಿತ್ತು. ಇಷ್ಟು ವರುಷಗಳ ಅನುಭವದಿಂದ ಕಾಂಗ್ರೆಸ್ಸಿನಲ್ಲಿ ಅದರ ಇಂದಿನ ಸ್ಥಿತಿಗಾಗಿ ನನ್ನ ವಿಶ್ವಾಸ ಕಡಮೆಯಾಗಿದೆ.

ನಾನು ಈ ಮೊದಲೇ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿದ್ದೆ. ಅದನ್ನು ಸ್ವೀಕಾರ ಮಾಡದೆ, ನಿನ್ನಂಥಾ ನಿಷ್ಕಾಮಂತರು ಸಿಗುವದು ಅಶಕ್ಯ. ಕಾಂಗ್ರೆಸ್ಸಿನಲ್ಲೇ ಇದ್ದು ಕಾಂಗ್ರೆಸ್ಸಿನ ಕೊಳಚೆಯನ್ನು ಸುಧಾರಿಸೋಣವೆಂದು ಹೇಳುತ್ತಾರೆ.

ಜನತಾ ವಿರೋಧಿನೀತಿ, ಅಧಿಕಾರದ ಕಚ್ಚಾಟ, ಸ್ವಾರ್ಥ ಭಾವನೆ, ಸುಳ್ಳು, ಮೋಸತನ ನೋಡಲಾಗಿ ಕಾಂಗ್ರೆಸ್ ಜನತೆಯ ಸೇವೆಯನ್ನು ಮಾಡದೇ, ರೈತ ಬಾಂಧವರ ಸುಲಿಗೆ, ಕೊಲೆ, ಅನ್ಯಾಯ ನಡೆಸಿದ ಕಾಂಗ್ರೆಸ ರಾಜ್ಯವು ಜನಾಂಗವನ್ನು ಕಷ್ಟಕ್ಕೀಡು ಮಾಡಿದೆ.

ರಾಮರಾಜ್ಯವನ್ನು ಮಾಡುವೆವೆಂದು ಹೇಳಿದ ಕಾಂಗ್ರೆಸ್ ರಾಜ್ಯ ಇವತ್ತು ರಾಕ್ಷಸೀ ರಾಜ್ಯವಾಗಿದೆಯಾದ್ದರಿಂದ ನಾನು ರಾಜೀನಾಮೆ ಕೊಟ್ಟಿದ್ದೇನೆ.

ಬಾಗಲಕೋಟೆ—

ಸರಕಾರಿ ಆಸ್ಪತ್ರೆಯಲ್ಲಿ ಸುಲಿಗೆ ಧಾರಾಳವಾಗಿದೆ

ಅಲ್ಲಿ ಮನುಷ್ಯರಿಗೆ ಬೆಲೆಯಿಲ್ಲ, ಹಣಕ್ಕೆ ಹೆಚ್ಚು ಬೆಲೆ

ಬಾಗಲಕೋಟೆಯ ಸರಕಾರಿ ದವಾಖಾನೆಯಲ್ಲಿ ಬಡವರಿಗೆ ದಾತರಿಲ್ಲದಂತೆ ಆಗಿದೆ. ಬಡಜನರ ಸುಲಿಗೆ ಒಂದೇ ಸವನೆ ನಡೆದಿದೆ. ದವಾಖಾನೆಯ ಡಾ। ಪ್ರಭು ಎಂಬವರು ಹಣವಿಲ್ಲದೆ ರೋಗಿಗಳನ್ನು ವಿಚಾರಿಸುವಂತಿಲ್ಲ. ಒಂದು ಇಂಜಕ್ಷನಿಗೆ ರೂ. 4ರಿಂದ ರೂ. 5ರ ತನಕ ತೆಗೆದುಕೊಳ್ಳುತ್ತಾರಂತೆ. ಹಳ್ಳಿಯ ರೋಗಿಗಳು ಇಂಜಕ್ಷನ್ ಟ್ಯೂಬ್ ನಾವೇ ಖರೀದಿ ಮಾಡಿ ತರುತ್ತೇವೆ, ಔಷಧದ ಚೀಟಿ ಬರೆದುಕೊಡಿರೆಂದು ಕೇಳಿದರೆ, ಡಾಕ್ಟರರು ರೂಪಾಯಿ ಕೊಡು ನಾನೇ ಔಷಧ ತರಿಸಿ ಇಂಜಕ್ಷನ್ ಕೊಡುತ್ತೇನೆಂದು ಹೇಳುತ್ತಿರುವರಂತೆ. ಹಣ ಕೊಡದಿದ್ದರೆ ದವಾಖಾನೆಯೊಳಗೆ ಪ್ರವೇಶವೇ ಸಿಗುವುದಿಲ್ಲವೆಂದು ಜನರು ತಕರಾರು ಮಾಡುತ್ತಿರುವರು. ಕೆಲವು ದಿವಸಗಳ ಹಿಂದೆ ಇದ್ದಲಗಿ ಗ್ರಾಮದಲ್ಲಿಯ ಬಡ ಸಾಲೆ ಮಾಸ್ತರರು ತಮ್ಮ ಹೆಂಡತಿಯನ್ನು ಬಾಣಂತಿತನದ ಸಲುವಾಗಿ ಬಾಗಲಕೋಟೆಯ ದವಾಖಾನೆಗೆ ಕರೆದುಕೊಂಡು ಬಂದಿದ್ದು, ದವಾಖಾನೆಯಲ್ಲಿ ಪ್ರವೇಶದ ಸಲುವಾಗಿ ಎಷ್ಟು ಪ್ರಯತ್ನ ಮಾಡಿದರೂ, ರೊಕ್ಕವಿಲ್ಲದೆ ಪ್ರವೇಶ ಸಿಗುವುದಿಲ್ಲವೆಂದು ಹೇಳಿದ ನಂತರ ತನ್ನಲ್ಲಿದ್ದ ಸ್ವಲ್ಪ ಹಣ ಕೊಟ್ಟ ನಂತರ, ಪ್ರವೇಶ ದೊರೆಯಿತಂತೆ. ಡಾಕ್ಟರರಿಗೆ ಬೇಕಾದಷ್ಟು ಹಣ ಕೊಡಲಿಲ್ಲೆಂಬ ಸಿಟ್ಟಿನಿಂದ, ಬಾಣಂತಿಯ ಆರೈಕೆ ಯೋಗ್ಯ ರೀತಿಯಲ್ಲಿ ಮಾಡದಿದ್ದುದರಿಂದ, ಮಾಸ್ತರರ ಪತ್ನಿ ಸಾವಿಗೆ ತುತ್ತಾಗಬೇಕಾಯಿತು. ಈ ರೀತಿಯ ಅಮಾನುಷ ಕೃತಿಗಳು ದವಾಖಾನೆಯಲ್ಲಿ ನಡೆಯುತ್ತಿದ್ದರೂ ಕೂಡ, ಸರಕಾರದವರಾಗಲೀ, ಮುನಿಸಿಪಾಲಿಟಿಯವರಾಗಲೀ ಇದರ ಕುರಿತು ಚೌಕಾಶಿ ಮಾಡದಿರುವುದನ್ನು ನೋಡಿ ಜನರು ಬೇಸತ್ತಿರುವರು. ಮೇಲಾಧಿಕಾರಿಗಳು ಬಾಗಲಕೋಟೆ ಸರಕಾರಿ ದವಾಖಾನೆಯಲ್ಲಿಯ ಅತ್ಯಾಚಾರ ಮತ್ತು ಬಡವರ ಸುಲಿಗೆಯಾಗುತ್ತಿರುವುದನ್ನು ಕೂಡಲೇ ತಡೆಹಿಡಿಯಬೇಕೆಂದು ಜನರು ಅಪೇಕ್ಷಿಸುತ್ತಿದ್ದಾರೆ.

ಸ್ಟಾಕ್‌ಹೋಂ ಮಹಾಧಿವೇಶನದ ಕರೆ

(೫ನೇ ಪುಟದಿಂದ)

ಖಂಡನೆ !

ಸ್ಟಾಕ್‌ಹೋಮ್ ಅಧಿವೇಶನದಲ್ಲಿ ಭಾಗವಹಿಸಲು ಬಂದಿದ್ದ ಏಷ್ಯಾ—ಆಫ್ರಿಕಾಗಳ ಪ್ರತಿನಿಧಿಗಳು ಇರಾಕ್ ಹಾಗೂ ಜೋರ್ಡಾನ್‌ಗಳಲ್ಲಿ ನಡೆದ ಆಂಗ್ಲೋ—ಅಮೇರಿಕನ್‌ರ ಹಸ್ತಕ್ಷೇಪವನ್ನು ತೀವ್ರವಾಗಿ ಖಂಡಿಸಿದರು.

ಏಷ್ಯಾ—ಆಫ್ರಿಕಾಗಳ ಪ್ರತಿನಿಧಿಗಳ ವಿಶೇಷ ಸಭೆಯೊಂದು ಇದಕ್ಕಾಗಿಯೇ ನಡೆದು "ನೂತನ ಇರಾಕ್ ಪ್ರಜಾಪ್ರಭುತ್ವವನ್ನು ಹಾಳುಮಾಡಲು ನಡೆದ ಆಕ್ರಮಣ"ವಿದೆಂದು ಖಂಡಿಸಲಾಯಿತು. "ಸಾಮ್ರಾಜ್ಯಶಾಹಿಗಳು ಆಫ್ರೋ–ಏಷಿಯನ್ ಕುಟುಂಬ ರಾಷ್ಟ್ರವೊಂದರ ಮೇಲೆ ನಡೆಸಿದ ಈ ಧಾಳಿ ನಾವೆಲ್ಲ ಐಕ್ಯತೆಯಿಂದಲೂ ಸಾಮೂಹಿಕವಾಗಿಯೂ ಎದುರಿಸಬೇಕಾದ ನಮ್ಮ ಮೇಲೆ ನಡೆದ ಧಾಳಿ" ಎಂದೂ ಗೊತ್ತುವಳಿ ಹೇಳಿದೆ.

ಭಾರತ ಪ್ರತಿನಿಧಿ ಮಂಡಳದ ಶ್ರೀಮತಿ ರಾಮೇಶ್ವರಿ ನೆಹ್ರೂರವರು ಅಧ್ಯಕ್ಷತೆ ವಹಿಸಿದ್ದರು. ಮಾತನಾಡಿದವರಲ್ಲಿ ಪೋಲಂಡಿನ ಆರ್ಥಿಕ ತಜ್ಞ ಪ್ರೊ। ಆಸ್ಕರ್ ಲಾಂಜ್, ತುರ್ಕಿಸ್ತಾನದ ಹೆಸರಾಂತ ಕವಿ ನಾಜಿಮ್ ಹಿಕ್ಮತ್, ರಷ್ಯದ ಖ್ಯಾತ ಬರೆಹಗಾರ ಇಲ್ಯಾ ಎಹ್ರೆನ್‌ಬರ್ಗ್, ಫ್ರಾನ್ಸ್‌ನ ರಾಜಕಾರಣಿ ಪೀರೆ ಕಾಟ್ ಮತ್ತು ಚೀನಾದ ನಾಯಕ ಕು ಮೋ ಜೋ ಅವರುಗಳು ಪ್ರಮುಖರಾಗಿದ್ದರು.

ಭಾರತದ ದ್ವಿತೀಯ ಯೋಜನೆಯ ಕರಡನ್ನು ಸಿದ್ಧಪಡಿಸಲು ನೆರವಾಗಿದ್ದ ಪ್ರೊ। ಲಾಂಜ್‌ರವರು ಚರ್ಚೆಯನ್ನಾರಂಭಿಸುತ್ತ "ಶಸ್ತ್ರಾಸ್ತ್ರಗಳಿಗೆ ಹಣ ಇಲ್ಲವೆ ಮುಗ್ಗಟ್ಟು" ಎಂಬ ತತ್ವವನ್ನು ಕಟುವಾಗಿ ಖಂಡಿಸಿ ಪೂರ್ವ ಪಶ್ಚಿಮಗಳ ಪ್ರಾಮಾಣಿಕ ವಾಣಿಜ್ಯ ಸಹಕಾರ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ನೆರವಾಗುತ್ತದೆ ಮತ್ತು ಪೇಟೆಗಳ ವಿಸ್ತರಣೆಗೂ ಸಹಕಾರಿಯಾಗುತ್ತದೆ ಮತ್ತು ನಿರುದ್ಯೋಗ ನಿವಾರಣೆಗೂ ಸಹಾಯಕವಾಗುತ್ತದೆಯೆ ವಿನಃ ಶಸ್ತ್ರಾಸ್ತ್ರಗಳ ಆರ್ಥಿಕ ತತ್ವಜ್ಞಾನ ಎಂದಿಗೂ ಪ್ರಯೋಜನಕ್ಕೆ ಬಾರದೆಂದು ಹೇಳಿದರು.

ಕವಿ ನಾಸೀಮ್ ಹಿಕ್ಮತ್ ತಮ್ಮ ಜನತೆಯ ಅಭಿನಂದನೆಗಳನ್ನು ಇರಾಕ್ ಮತ್ತು ಲೆಬನಾನಿನ ಯೋಧ ಸೋದರರಿಗೆ ಅರ್ಪಿಸಿದಾಗ ಅತ್ಯದ್ಭುತವಾದ ಸಂಭ್ರಮದ ಕೂಗೂ ಕೇಳಿ ಬರುತ್ತಿತ್ತು.

ಫ್ರಾನ್ಸಿನ ಮಾಜಿ ಪ್ರಧಾನಿ ಪೀರೆ ಕಾಟ್ "ಪ್ರಪಂಚದ ತೂಕ ಈಗ ಪೂರ್ವದ ಪರವಾಗಿದೆ" ಎಂಬುದನ್ನು ತಮ್ಮ ಯೂರೋಪಿಯನ್ ಗೆಳೆಯರು ತಿಳಿದುಕೊಳ್ಳಬೇಕೆಂದು ಹೇಳಿದರು. ಆಂಗ್ಲೋ ಅಮೇರಿಕನ್‌ರ ಪ್ರವೇಶ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಇನ್ನಷ್ಟು ಬೇರ್ಪಡಿಸುತ್ತವೆಯೆಂದು ಅವರು ಹೇಳಿದರು.

ಲೆಬನಾನಿನ ಡಾ। ಜಿ. ಹನ್ನಾ "ತಮ್ಮ ದೇಶ ಇಂದು ಅಗ್ನಿಕುಂಡದ ಮೇಲಿದೆ" ಎಂದು ಹೇಳುತ್ತ "ಅಮೇರಿಕೆಯ ಆಕ್ರಮಣ ತಮ್ಮ ಜನತೆಯನ್ನು ಸಂಘಟಿಸಿದೆ, ನಮ್ಮ ಹೋರಾಟದ ಬಗ್ಗೆ ಉದಾಸೀನರಾಗಿದ್ದವರೇ ಇಂದು ನಮ್ಮೊಂದಿಗೆ ಸೇರಿಕೊಂಡಿದ್ದಾರೆ" ಎಂದೂ ತಿಳಿಸಿದರು.

ಈ ವೇದಿಕೆಯು ಪ್ರಪಂಚದ ಜನತೆಯ ಅಭಿಪ್ರಾಯವನ್ನು ಪ್ರತಿಧ್ವನಿಸುವ ಮಹಾಧಿವೇಶನವಾಗಿತ್ತು.

★ ಮಧ್ಯಪೂರ್ವದಲ್ಲಿಯ ಸ್ಥಿತಿಗತಿಗಳ ಬಗ್ಗೆ ಅಧಿವೇಶನ ವಿಶೇಷ ಗಮನ ಕೊಟ್ಟಿತ್ತು.

★ ಅಮೇರಿಕಾ ಹಾಗೂ ಇಂಗ್ಲಂಡಿನ ಪ್ರತಿನಿಧಿಗಳೂ ತಮ್ಮ ಸರಕಾರಗಳ ಆಕ್ರಮಣ ನೀತಿಯನ್ನು ಖಂಡಿಸುವಲ್ಲಿ ಇನ್ನುಳಿದ ಪ್ರತಿನಿಧಿಗಳೊಂದಿಗೆ ಸೇರಿಕೊಂಡರು. ಗೊತ್ತುವಳಿಗಳು ಅವಿರೋಧವಾಗಿ ಅಂಗೀಕರಿಸಲ್ಪಟ್ಟವು.

[ಮುಂದಿನ ವಾರ: ನಿರಾಯುಧೀಕರಣದ ಬಗ್ಗೆ ಜೋಲಿಯೋ ಕ್ಯೂರಿಯವರಿತ್ತ ವರದಿಯ ಪೂರ್ತಿ ಪಾಠದ ಪ್ರಮುಖ ಅಂಶಗಳನ್ನು ಕೊಡಲಾಗುವುದು]

ಭಾರತ ಎಲೆಕ್ಟ್ರಾನಿಕ್ಸ್ ಕೆಲಸಗಾರರ ವಿಜಯ

22 ತಿಂಗಳ ಬಳಿಕ ಕೆಲಸಗಾರನ ಪುನರ್ನೇಮಕ

ಭಾರತ ಸರ್ಕಾರದ ರಕ್ಷಣಾ ಶಾಖೆಯು ಬೆಂಗಳೂರಿನಲ್ಲಿ ನಡೆಸುತ್ತಿರುವ ಭಾರತ ಎಲೆಕ್ಟ್ರಾನಿಕ್ಸ್ ಕೆಲಸಗಾರರಿಗೆ ಇದೀಗ ಪ್ರಚಂಡ ಜಯ ದೊರೆತಿದೆ. ಭಾರತ್ ಎಲೆಕ್ಟ್ರಾನಿಕ್ಸ್ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಜಿ. ನಾರಾಯಣಪ್ಪನವರನ್ನು 22 ತಿಂಗಳ ಹಿಂದೆ ಮ್ಯಾನೇಜ್‌ಮೆಂಟಿನವರು ವಜಾ ಮಾಡಿದ್ದರು. ಇವರನ್ನು ವಜಾ ಮಾಡಲು ಕಾರಣವೇಂದರೆ, ಮ್ಯಾನೇಜ್‌ಮೆಂಟನ್ನು ಟೀಕಿಸಿ ಸಂಘದ ಪರವಾಗಿ ನೋಟೀಸೊಂದನ್ನು ಪ್ರಚುರಪಡಿಸಿದ್ದು. ಈ ನೋಟೀಸಿನಲ್ಲಿ ಕೆಲವು ಶಬ್ದಗಳಿಗೆ ಆರೋಪವೆತ್ತಿ, ನ್ಯಾಯವಾದ ವಿಚಾರಣೆಯೂ ಇಲ್ಲದೆ ಕಾರ್ಯದರ್ಶಿಯವರನ್ನು ವಜಾ ಮಾಡಲಾಯಿತು. ಈ ರೀತಿ ವಜಾ ಮಾಡಿದಲ್ಲಿ ಸಂಘವೇ ಮುರಿದು ಹೋಗುವುದೆಂಬ ನಂಬಿಕೆ ಮ್ಯಾನೇಜ್‌ಮೆಂಟಿನ ಕೆಲವರಲ್ಲಿತ್ತು. ಮತ್ತು ಪೋಟಿಟಿ ಸಂಘ (ಕೈಗೊಂಬೆ ಸಂಘ)ವು ಬೆಳೆದು ಬರುತ್ತದೆಂಬ ವಿಶ್ವಾಸವಿತ್ತು. ಆದರೆ ಈ ಕನಸು ನನಸಾಗಲಿಲ್ಲ. ಭಾರತ್ ಎಲೆಕ್ಟ್ರಾನಿಕ್ಸ್ ಎಂಪ್ಲಾಯೀಸ್ ಯೂನಿಯನ್ ಈ ಪ್ರಶ್ನೆಯ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಕಳೆದ ಒಂದೂವರೆ ವರ್ಷದಿಂದ ಇತ್ಯರ್ಥ ಮಾಡಲು ದುಡಿಯಿತು. ಇದನ್ನು ಲೇಬರ್ ಕೋರ್ಟಿಗೆ ಮೈಸೂರು ಸರಕಾರವು ವಹಿಸಿತು. ಲೇಬರ್ ಕೋರ್ಟಿನಲ್ಲೂ ಸಹ ಮ್ಯಾನೇಜ್‌ಮೆಂಟಿನವರು ಈ ಪ್ರಶ್ನೆ ಬಗೆಹರಿಯದಂತಾಗಲು ಕಾನೂನಿನ ಅಡ್ಡಿ ಆತಂಕ ತರಲು ಯತ್ನಿಸಿದರು. ನಾರಾಯಣಪ್ಪನವರಿಗೆ ಸಂಬಂಧಪಟ್ಟ ವಿವಾದವನ್ನು ಕೋರ್ಟಿಗೆ ಒಪ್ಪಿಸಲು ಮೈಸೂರು ಸರಕಾರಕ್ಕೆ ಹಕ್ಕಿಲ್ಲವೆಂದೂ, ಈ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರ ನಡೆಸುತ್ತಿರುವುದರಿಂದ ಕೇಂದ್ರ ಸರ್ಕಾರವೇ ಒಪ್ಪಿಸಬೇಕೆಂದೂ, ಆದ್ದರಿಂದ ಮೈಸೂರು ಸರಕಾರದ ಲೇಬರ್ ಕೋರ್ಟಿನಲ್ಲಿ ವಿವಾದವು ಮುಂದುವರಿಯುವಂತಿಲ್ಲವೆಂದೂ ವಾದ ಮಾಡಲಾಯಿತು. ಸಂಘದ ಪರವಾಗಿ ಶ್ರೀ ಎಸ್. ಮೋಹನ್ ಕುಮಾರ ಮಂಗಳಂ ಮತ್ತು ಕೆ. ರಾಮದಾಸ್‌ರವರು ವಕಾಲತ್ತು ವಹಿಸಿದ್ದರು. ವಾದ ನಡೆದ ನಂತರ ತೀರ್ಮಾನವು ಕಾರ್ಮಿಕರ ಪರವಾಗಿ ಆಯಿತು. ಮ್ಯಾನೇಜ್‌ಮೆಂಟಿನ ಕುತಂತ್ರವು ಜರುಗಲಿಲ್ಲ.

ಇದಾದ ನಂತರ ಕಾರ್ಮಿಕ ಸಂಘದೊಡನೆ ದೀರ್ಘಕಾಲ ಮಾತುಕತೆಗಳು ನಡೆದು, ಶ್ರೀ ಜಿ. ನಾರಾಯಣಪ್ಪನವರನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳಲೂ, ಅವರಿಗೆ ಮೂರು ತಿಂಗಳ ಸಂಬಳ ಮತ್ತು ಅಲೋಯನ್ಸನ್ನು ಪರಿಹಾರವಾಗಿ ಕೊಡಲೂ ಮ್ಯಾನೇಜ್‌ಮೆಂಟಿನವರು ಒಪ್ಪಿದ್ದಾರೆ.

ಈ ಒಪ್ಪಂದವು ಭಾರತ್ ಎಲೆಕ್ಟ್ರಾನಿಕ್ಸ್ ಕಾರ್ಮಿಕರ ಪ್ರಥಮ ಜಯ. ಇದರಿಂದಾಗಿ ಅವರ ಸಂಘವು ಇನ್ನೂ ಬಲಗೊಂಡು ಹೆಚ್ಚಿನ ಜಯಗಳನ್ನು ಗಳಿಸುವುದೆಂಬ ನಂಬಿಕೆ ಬೆಳೆಯುತ್ತಿದೆ.

ಭದ್ರಾವತಿಯಲ್ಲಿ—

ಪಿ.ಎಸ್.ಪಿ. ನಾಯಕರ ಜನಸೇವೆ

ಈ ಊರಿನಲ್ಲಿ ಪ್ರಮುಖರಾದ ಶ್ರೀ ಅನ್ವರ್ ಖುದ್ದೂಸ್ ಎಂಬುವರು ಕಬ್ಬಿಣ ಕಾರ್ಖಾನೆಯ ಕೂಲಿಗಾರರ ಸಂಘದ ಅಧ್ಯಕ್ಷರಾಗಿರುವುದು ಸರಿಯಷ್ಟೆ—ಇವರು ಪಿ ಎಸ್. ಪಿ. ಸದಸ್ಯರೂ ಹೌದು. ಇವರ ಹೆಸರಿನಲ್ಲಿಯೆ (ಹಳೇನಗರದಲ್ಲಿ) ಅಂದರೆ ಅನ್ವರ್ ಕಾಲೋನಿ ಎಂಬುದಾಗಿದೆ. ಇವರು ಜನಸೇವೆಗೆ ಹಗಲಿರುಳೂ ದುಡಿಯುವವರು. ಇವರ ಸೇವೆಯ ಸ್ಯಾಂಪಲ್ ಮಾತ್ರ ಇಲ್ಲಿ ಕೊಡಲಾಗಿದೆ—

ರಿಸರ್ವ್ ಬ್ಯಾಂಕ್ ಶೆಡ್ಡನ್ನು ಕಿತ್ತ ತಕ್ಷಣ ಹಳೇನಗರದಲ್ಲಿ ಕಂಪೆನಿಯ ಕೆಲಸಗಾರರಿಗೂ ಮತ್ತು ಇನ್ನು ಇತರೇ ಜನಗಳಿಗೂ ಸೈಟುಗಳನ್ನು ಹಂಚಲಾಯಿತು. ಈ ಸೈಟಿನ ಬೆಲೆ ಒಂದು ನೂರು ರೂಪಾಯಿಗಳು ಮಾತ್ರ. ಆದರೆ ಶ್ರೀ ಅನ್ವರ್‌ರವರು ಒಂದು ನೂರ ಹತ್ತು ರೂಪಾಯಿಗಳನ್ನೂ ತೆಗೆದುಕೊಂಡು ನೂರು ರೂಪಾಯಿಗಳಿಗೇ ರಶೀದಿಯನ್ನು ಕೊಟ್ಟಿರುವುದೇ ಇವರ ಜನಸೇವೆ. ಈ ರೀತಿ ಸುಮಾರು 250 ಸೈಟುಗಳಿಂದ ರೂ. 2,500ಗಳನ್ನು ಜನಸೇವಕರು ಪಡೆದಿದ್ದಾರೆ. ಆದ್ದರಿಂದಲೇ ಅನ್ವರ್ ಕಾಲೋನಿ ಎಂದೂ ಈ ಕಾಲೋನಿಗೆ ಹೆಸರಾಗಿದೆ.

ಚಿಂತಾಮಣಿಯಲ್ಲಿ—

ಖಂಡನಾ ಸಭೆ

ತಾ. 19—7—58ನೇ ಶನಿವಾರ ಸಂಜೆ 7-30 ಗಂಟೆಗೆ ಚಿಂತಾಮಣಿಯ ಆಜಾದ್ ಚೌಕದಲ್ಲಿ ಶ್ರೀ ಎ. ಟಿ. ಚನ್ನೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸರ್ವಾನುಮತದಿಂದ ಸ್ವೀಕೃತವಾದ ನಿರ್ಣಯಗಳು:—

ವಿಶ್ವಶಾಂತಿಗೆ ಧಕ್ಕೆ ತರುವ ರೀತಿಯಲ್ಲಿ ಲೆಬನಾನ್ ಸ್ವಾತಂತ್ರ್ಯ ಪ್ರೇಮಿಗಳನ್ನು ದಮನ ಮಾಡುವುದಕ್ಕೆ, ವಿಶ್ವದ ಸಾಮ್ರಾಜ್ಯಶಾಹಿ ನಾಯಕ, ಅಮೇರಿಕ ಸರ್ಕಾರ, ಲೆಬನಾನ್ ದೇಶಕ್ಕೆ ಸೈನ್ಯವನ್ನು ರವಾನಿಸಿರುವುದು ಯುದ್ಧ ಪ್ರಚೋದಕ ನೀತಿಯಾಗಿದೆ. ಅಮೇರಿಕಾ ಸರ್ಕಾರ ತನ್ನ ಸೈನ್ಯವನ್ನು ತಕ್ಷಣ ಹಿಂತೆಗೆದುಕೊಂಡು ಲೆಬನಾನ್ ಮಧ್ಯೆ ಪ್ರವೇಶ ಮಾಡಿರುವುದನ್ನು ನಿಲ್ಲಿಸಬೇಕು. ಮತ್ತು ಭಾರತ ಸರ್ಕಾರವೂ ಹಾಗೂ ಪ್ರಧಾನಿ ಶ್ರೀ ಜವಹರಲಾಲ್ ನೆಹ್ರೂರವರೂ, ಬೇರೆ ದೇಶಗಳ ಅಂತರಂಗಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕೈಹಾಕುವುದನ್ನು ಖಚಿತವಾಗಿ ಖಂಡಿಸಬೇಕೆಂದು ಈ ಸಭೆ ಒತ್ತಾಯಪಡಿಸುತ್ತದೆ.

ಅಧಿಕ ತೆರಿಗೆಗಳ ವಿರುದ್ಧ ಪ್ರತಿಭಟನೆ

ಇದೇ ಕಾಲಕ್ಕೆ ಚಿಂತಾಮಣಿ ನಗರ ಸಭೆಯವರ ಅಧಿಕ ತೆರಿಗೆಗಳ ವಿರುದ್ಧ ಪ್ರತಿಭಟನಾ ಸಭೆಯನ್ನು ಏರ್ಪಡಿಸಿ ಕೆಳಗಿನ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ಚಿಂತಾಮಣಿ ಪೌರ ಸಭೆಯವರು ಹೆಚ್ಚು ಮಾಡಿರುವ ಮನೆ ಕಂದಾಯ ಹಾಗೂ ನೀರಿನ ಕಂದಾಯಗಳನ್ನು ತುಂಬಾ ಜಾಸ್ತಿಯಾಗಿದ್ದು ಪೌರ ಸಭೆ ಮತ್ತು ಸರಕಾರವು ಈಗ ಹೆಚ್ಚಿಸಿರುವ ತೆರಿಗೆಯನ್ನು ಶೇ. 75ರಷ್ಟು ಕಮ್ಮಿ ಮಾಡಬೇಕೆಂದು ಒತ್ತಾಯಿಸುತ್ತದೆ.

ಅಗ್ರಹಾರ, ಹರಿಜನ ಕೇರಿ, ಪೋಸ್ಟ್ ಆಫೀಸ್ ರೋಡು, ವೆಂಕಟಗಿರಿ ಕೋಟೆ, ನಾರಸಿಂಹ ಪೇಟೆ, ಸೋಂಪೇಟ್ಟೆಪಲ್ಲಿ, ಸಾಲಿಪೇಟೆ, ಬೋಯಿ ದೊಡ್ಡಿಗಳಲ್ಲಿ ರಸ್ತೆಗಳು ದುರುಸ್ತಿಲ್ಲದೆ ಸಂಚಾರಕ್ಕೆ ತೊಂದರೆಯಾಗಿರುವುದರಿಂದ ಜಾಗ್ರತೆಯಾಗಿ ಪೌರಸಭೆಯವರು ತೀವ್ರ ಗಮನ ಕೊಡಬೇಕು.

ಪೌರಸಭೆಯು, ಜನತೆಯ ಆರೋಗ್ಯದ ಕಡೆಗೆ ಗಮನ ಕೊಡದೇ ಇರುವುದನ್ನು ಖಂಡಿಸುತ್ತದೆ. ಮತ್ತು ಪೌರಸಭೆ ಆರೋಗ್ಯದ ಕಡೆ ತೀವ್ರ ಗಮನ ಕೊಡಬೇಕೆಂದು ಒತ್ತಾಯಪಡಿಸುತ್ತದೆ.

ಯಾವ ಪೌರಸಭೆಯವರೂ ಹಾಕದೆ ಇರುವ ಕೆಲವು ವಸ್ತುಗಳ ಮೇಲೆ ಈ ಪೌರಸಭೆ ಹಾಕಿರುವ ತೆಂಗೆ ನೀತಿಯನ್ನು ಈ ಸಭೆ ತೀವ್ರವಾಗಿ ವಿರೋಧಿಸುತ್ತದೆ.

ಚಿಂತಾಮಣಿ ಸಂತೆ ಕಂಟ್ರಾಕ್ಟರ್ ಕಾನೂನು ಬಿಟ್ಟು ಒಂದಕ್ಕೆ ಎರಡರಷ್ಟು ಸುಂಕವನ್ನು ವಸೂಲಿ ಮಾಡುತ್ತಿರುವುದನ್ನು ಈ ಸಭೆ ಖಂಡಿಸುತ್ತದೆ. ಮತ್ತು ಸರಕಾರ ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸುತ್ತದೆ.

ಭದ್ರಾವತಿಯಲ್ಲಿ ರಸ್ತೆಗಳ ದುರವಸ್ಥೆ

ಭದ್ರಾವತಿಯು ಧಕ್ಷಿಣ ಭಾರತದ ಮುಖ್ಯ ಕೈಗಾರಿಕಾ ಕ್ಷೇತ್ರ ಮತ್ತು ಸಂಸ್ಥಾನಕ್ಕೆ ಹೆಚ್ಚಿನ ಆದಾಯ ತರುವ ಕೇಂದ್ರ ಸ್ಥಾನವಾಗಿದೆ. ಸಂಸ್ಥಾನಕ್ಕೆ ಹೆಮ್ಮೆ ತರುವಂಥ ಒಂದು ಕೈಗಾರಿಕಾ ಪ್ರೇಕ್ಷಣೀಯ ಸ್ಥಳವಾದ ಈ ಭದ್ರಾವತಿಯಲ್ಲಿ ರಸ್ತೆಗಳ ದುರವಸ್ಥೆಯನ್ನು ನೋಡಿದರೆ ಬಹು ದುಃಖವಾಗುತ್ತೆ. ಮುಖ್ಯವಾಗಿ ಭದ್ರಾನದಿ ಸೇತುವೆಯಿಂದ ಹಿಡಿದು ಬಸ್ ನಿಲ್ದಾಣದವರೆಗಿನ ರಸ್ತೆ, ಸ್ಟೇಷನ್ ಮುಂಭಾಗದ ರಸ್ತೆಗಳು ಇರುವದು ಕೇವಲ ಕೆಲವು ಫರ್ಲಾಂಗ್ ದೂರ ಮಾತ್ರ. ಇವೇ ಜನನಿಬಿಡವಾದ ಮತ್ತು ಅನೇಕ ವ್ಯಾಪಾರೀ ಕೇಂದ್ರ ಸ್ಥಾನಗಳಾಗಿ ಸಹಸ್ರಾರು ಬಸ್ಸುಗಳೂ, ಲಾರಿಗಳೂ, ಕಾರುಗಳೂ ಓಡಾಡುವ ಏಕೈಕ ಮಾರ್ಗಗಳಾಗಿವೆ. ಶಿವಮೊಗ್ಗದ ಸಕ್ಕರೆ ಕಾರ್ಖಾನೆಯು ಪ್ರಾರಂಭವಾದ ಮೇಲೆ ಅಂತೂ ವಾಹನ ಸಂಚಾರ ಹೇಳತೀರದಾಗಿದೆ. ಈ ಭಾಗದಲ್ಲಿ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕಿದೆ. ಆದರೆ ಅಸಹ್ಯ ಬರುವಂಥ ರಸ್ತೆಗಳಾಗಿ ಪರಿಣಮಿಸಿವೆ. ರಸ್ತೆಯು ಕಾಂಕ್ರೀಟಿನಿಂದಾಗಿ ಫುಟ್‌ಪಾತಿಗಿಂತಲೂ ೩ ಇಂಚು ಎತ್ತರವಾಗಿದ್ದು ಕಾಂಕ್ರೀಟ್ ಹಾಕಿರುವ ರಸ್ತೆ ಅಗಲ ಬಹಳ ಕಿರಿದಾಗಿದ್ದು ಎರಡು ವಾಹನಗಳು ಒಮ್ಮೆಗೇ ಚಲಿಸಲು ಆಗದಾಗಿದೆ. ಇದರ ಮಧ್ಯೆ ಫುಟ್‌ಪಾತುಗಳಲ್ಲಿ ಮಣ್ಣು ಮಳೆಯಿಂದ ಕೆಸರಾಗಿ ಕಾಲಿಡಲು ಸಾಧ್ಯವಿಲ್ಲದಾಗಿದೆ. ಬಿತ್ತನೆಯ ಕಾಲದಲ್ಲಿ ಭತ್ತ ಕ್ಯಾಪಿ ಅಣಿ ಮಾಡಿದ ಕೆಸರು ಗದ್ದೆಗಳಂತೆ ಇವೆ ಈ ಫುಟ್‌ಪಾತುಗಳು. ವಾಹನಗಳ ಸಂಚಾರದಿಂದಾಗಿ ಪಕ್ಕದಲ್ಲಿ ಎಚ್ಚರ ತಪ್ಪಿ ನಡೆದಲ್ಲಿ ಕೊಚ್ಚೆ ಮಳೆನೀರು ಮೈ ಮೇಲೆ ಹಾರಿ ಬಟ್ಟೆಗಳನ್ನು ಕೆಡಿಸುವುದುಂಟು, ಮತ್ತು ಬೈಸಿಕಲ್‌ಗಳು ಬಿದ್ದ ಪ್ರಸಂಗಗಳೂ ಉಂಟು. ಅನೇಕ ವರ್ಷಗಳಿಂದ ಈ ಬಗ್ಗೆ ಮನವಿ ಮಾಡಿಕೊಂಡು ಈ ಅರ್ಧ ಮೈಲು ದೂರದಷ್ಟನ್ನಾದರೂ ಫುಟ್‌ಪಾತುಗಳನ್ನು ಮೆಟಲ್ ಅಥವಾ ಟಾರು

ಸಂಪಾದಕರಿಗೆ ಪತ್ರಗಳು

ಮಾಡಿಸಿಕೊಡಬೇಕೆಂದು ಬೇಡಿಕೊಂಡರೂ ಸಂಬಂಧಪಟ್ಟವರ ಕಿವಿಗೆ ಬೀಳದಾಗಿದೆ. ಮುನಸಿಪಾಲಿಟಿಗೆ ಕೇಳಿದಲ್ಲಿ P.W.D.ಯವರ ಕೆಲಸವೆಂದು ಹೇಳುತ್ತಾರೆ. P.W.D.ಯವರ ಕಿವಿಗಂತೂ ಈ ಕೂಗು ಕೇಳಿಬರುವಂತೆಯೇ ಇಲ್ಲ. ಈಗಲಾದರೂ ಸರ್ಕಾರದವರು ಇದಕ್ಕೆ ತೀವ್ರ ಗಮನ ಕೊಟ್ಟು ಮಲೆನಾಡಿನ ಘಾಟಾ ಮಾರ್ಗವಾದ ಬಿ. ಹೆಚ್. ರೋಡಿನ ಕೇವಲ ಅರ್ಧ ಮೈಲು ದೂರದ ಈ ಫುಟ್‌ಪಾತ್‌ಗಳನ್ನು, ಸ್ಟೇಷನ್ ರಸ್ತೆಯನ್ನೂ ಮೆಟಲ್ ಮಾಡಿ ಅಥವಾ ಟಾರು ಹಾಕಿಸಿ ಸಹಸ್ರಾರು ಜನತೆಗೆ ಉಪಕಾರ ಮಾಡಬೇಕೆಂದು ಜನತೆಯ ಪರವಾಗಿ ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ಹೀಗೆ ಮೆಟಲ್ ಮಾಡಿಸಿದಲ್ಲಿ ಊರು ಚಂದವಾಗಿ ಕಾಣುತ್ತದೆ ಮತ್ತು ಆರೋಗ್ಯ ದೃಷ್ಟಿಯಿಂದಲೂ ಸರಿಹೋಗುತ್ತದೆ.

ಯಂ. ಸುಬ್ಬರಾವ್
ಭದ್ರಾವತಿ

ನಾಗಲ್ಮಡಿಕೆ ನದಿಗೆ ಸೇತುವೆ ಎಂದು ?

ಪಾವಗಡ ತಾಲ್ಲೋಕು ನಾಗಲ್ಮಡಿಕೆ ನದಿಗೆ ಸೇತುವೆ ಬೇಕೆಂದು ಈ ಭಾಗದ ಪ್ರಜೆಗಳು ಕೇಳಿಕೊಳ್ಳುತ್ತಿದ್ದಾರೆ. ಆದರೆ ಘನ ಸರಕಾರವು ಒಂದಿಷ್ಟೂ ಗಮನ ಕೊಡುತ್ತಿಲ್ಲ. ಓಟು ಬೇಕಾದಾಗ ಮಾತ್ರ ಕಾಂಗ್ರೆಸ್ಸಿನವರು ಬಂದು ನಿಮಗೆ ಬಾವಿ ತೋಡಿಸಿಕೊಡುತ್ತೇವೆ, ಸೇತುವೆ ಕಟ್ಟಿಸಿ ಕೊಡುತ್ತೇವೆ ಎಂದು ಹೇಳಿದವರು ಹೊಳೆ ದಾಟಿಹೋಗುತ್ತಾರೆ. ಆಮೇಲೆ....ಏನು?

ಜನಗಳು, ದನಗಳು, ಎತ್ತಿನ ಗಾಡಿಗಳು ಓಡಾಡುವುದೇ ಕಷ್ಟವಾಗಿದೆ. ಇತ್ತೀಚಿಗೆ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರನ್ನು ನೋಡಬೇಕೆಂದು ಹೊರಟಿದ್ದಾಗ ಅವರ ಮೇಲೆ ಅವಿಶ್ವಾಸ ಬಂದುದು ತಿಳಿದು ಸುಮ್ಮನಾಗಬೇಕಾಯಿತು. ಹೀಗೆ ಮಂತ್ರಿಮಂಡಳಗಳು ನಮ್ಮಲ್ಲಿ ಉರುಳುವುದೇ ಜಾಸ್ತಿಯಾಗಿದೆಯೇ ವಿನಃ ಜನೋಪಯೋಗಿ ಕಾರ್ಯಗಳು ನಡೆಯದಿರುವುದು ಶೋಚನೀಯ.

ಎಂ. ಎಸ್. ವೆಂಕಟರಾಮಯ್ಯ
ಪಾವಗಡ

ಜೋಡಿ ಗ್ರಾಮಗಳ ರೈತ ಸಮ್ಮೇಲನಕ್ಕೆ ಸಿದ್ಧತೆ

ಮೈಸೂರು ರಾಜ್ಯದಲ್ಲಿರುವ ಜೋಡಿ ಮತ್ತು ಇನಾಂ ಗ್ರಾಮಗಳನ್ನು ಅಕ್ಟೋಬರ್ 3ರಂದು ಸರಕಾರ ಸಂಪೂರ್ಣವಾಗಿ ವಶಪಡಿಸಿಕೊಳ್ಳಬೇಕೆಂದು ರಾಜ್ಯದ ರೆವಿನ್ಯೂ ಮಂತ್ರಿಗಳಾದ ಮಾನ್ಯ ಕಡಿದಾಳ ಮಂಜಪ್ಪನವರು ತಿಳಿಸಿರುತ್ತಾರೆ: ಜೋಡಿ ಇನಾಂ ರದ್ದಿಯಾತಿ ಶಾಸನದಲ್ಲಿ ಇದಕ್ಕನುಕೂಲವಾಗುವಂತೆ ಯೋಗ್ಯ ತಿದ್ದುಪಡಿಯನ್ನು ಮುಂದಿನ ಎಸೆಂಬ್ಲಿ ಅಧಿವೇಶನದಲ್ಲಿ ಸರಕಾರ ತರಲಿದೆಯೆಂದೂ ಮಂತ್ರಿಗಳು ಸೂಚಿಸಿದ್ದಾರೆ. ಇದನ್ನು ಕರ್ನಾಟಕ ಪ್ರಾಂತೀಯ ರೈತ ಸಂಘವು ಸ್ವಾಗತಿಸುತ್ತದೆ ಮತ್ತು ಅದನ್ನು ಜಾರಿಗೊಳಿಸುವಾಗ ಸರಕಾರವು ರೈತ ಸಂಘಗಳ ಸಹಕಾರ ತೆಗೆದುಕೊಳ್ಳುವುದೆಂದು ನಂಬುತ್ತದೆ.

ಈಗಿರುವ ಶಾಸನದಲ್ಲಿ ಇನ್ನೂ ಕೆಲವು ತಿದ್ದುಪಡಿಗಳಾಗುವುದು ರೈತರ ಹಿತದೃಷ್ಟಿಯಿಂದ ಬಹಳ ಅಗತ್ಯವಿದೆಯೆಂಬುದನ್ನು ನಮ್ಮ ಅನುಭವ ತೋರಿಸಿಕೊಟ್ಟಿದೆ. ಈಗಿನ ಕಾನೂನಿನಿಂದ, ಅನೇಕ ವರ್ಷಗಳಿಂದ ಜಮೀನು ಸಾಗುವಳಿ ಮಾಡಿಕೊಂಡು ಬಂದಿದ್ದ ರೈತರಿಗೂ ಜಮೀನು ದೊರೆಯದೆ ಬಹಳ ತೊಂದರೆಯಾಗಿರುತ್ತದೆ. ಜೋಡಿ ಇನಾಂ ರದ್ದಿಯಾತಿ ಶಾಸನದಲ್ಲಿ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಾಡುವಾಗ ಸರಕಾರವು ಈ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಯೋಗ್ಯ ತಿದ್ದುಪಡಿ ಮಸೂದೆಯನ್ನು ತರುವುದಗತ್ಯ.

ಜೋಡಿ ಗ್ರಾಮಗಳ ರೈತರ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಿ, ಅವುಗಳ ಬಗ್ಗೆ ಸರಕಾರದ ಗಮನ ಸೆಳೆಯುವ ಯತ್ನದಿಂದ ಮೈಸೂರು ರಾಜ್ಯದ ಜೋಡಿ ಗ್ರಾಮಗಳ ರೈತರ ಸಮ್ಮೇಳನವನ್ನು ಕರೆಯಬೇಕಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಒಂದು ಸ್ವಾಗತ ಸಮಿತಿಯನ್ನು ರಚಿಸಲು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಆಗಸ್ಟ್ 3ನೇ ತಾರೀಕು ಭಾನುವಾರ ಕೋಲಾರ ಜಿಲ್ಲೆಯ ರೈತ ಸಂಘದ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿದೆ. ಎಲ್ಲ ಕಾರ್ಯಕರ್ತರೂ ಆ ಸಭೆಗೆ ಬಂದು ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಕಾರ್ಯದರ್ಶಿ,

ಕ. ಪ್ರಾಂತ ರೈತ ಸಂಘ, ಬೆಂಗಳೂರು

ರೆವಿನ್ಯೂ ಮಂತ್ರಿಗಳು ಗಮನಿಸಬೇಕು !

ಅರಸಿಕೆರೆ ತಾಲ್ಲೋಕು ಬಾಣಾವರದ ಹೋಬಳಿ ಈ ಗ್ರಾಮದ 15 ಮತ್ತು 16ನೇ ಸರ್ವೆ ನಂಬರುಗಳು ಹಂಗಾಮಿ ಸಾಗುವಳಿಗೆ ಕೊಟ್ಟಿದೆ. ಆದರೆ 100 ರಾಸುಗಳಿಗೆ 30 ಎಕ್ರೆ ಗೋಮಾಳವಿರಬೇಕೆಂದು ಕಾನೂನು ಇದೆ. ಈ ವಿಚಾರದಲ್ಲಿ ಅನೇಕ ಅರ್ಜಿಗಳನ್ನು ಕೊಟ್ಟರೂ ಗಮನಕ್ಕೆ ತಂದುಕೊಳ್ಳದೆ, ಎದುರು ಅರ್ಜಿದಾರರಂತೆ ತೀರ್ಮಾನವಾಗಿರುತ್ತೆ. ಘನ ಸರಕಾರ ಈ ವಿಚಾರ ಪರಿಶೀಲನೆ ಮಾಡಿ ಉಪಕಾರ ಮಾಡಿಕೊಡಲು ಪ್ರಾರ್ಥನೆ.

—ಕೆ. ಎಲ್. ಹುಚ್ಚಪ್ಪ

ಬಿಜಾಪುರದಲ್ಲಿ—

ಕುಡಿದ ಕಾಂಗ್ರೆಸ್ ಕಾರ್ಯದರ್ಶಿಯ ಬಂಧನ !

ಹೋದ ತಿಂಗಳಲ್ಲಿ ಲಮಾಣಿ ಜನರ ಪರಿಷತ್ತಿನಲ್ಲಿ ಶ್ರೀ ಎಸ್. ಆರ್. ಕಂಠಿ ಮತ್ತು ಎಸ್. ನಿಜಲಿಂಗಪ್ಪನವರು, ಮೈಸೂರು ರಾಜ್ಯದಲ್ಲಿ ಪಾನ ಪ್ರತಿಬಂಧ ಆಯಶಸ್ವಿಯಾಗಿದೆಂದು ಹೇಳಿದ್ದರು. ಈ ಕಾಂಗ್ರೆಸ ಮುಖಂಡರ ಹೇಳಿಕೆಯನ್ನು ಸಾಕ್ಷಾತ್ಕಾರ ಮಾಡುವಂಥಾ ಘಟನೆ 12—7—58ನೆ ರಾತ್ರಿಯಲ್ಲಿ ಬಿಜಾಪುರದಲ್ಲಿ ಘಟಿಸಿತು. ಕಾಂಗ್ರೆಸ್ಸಿನ ಜೊತೆಕಾರ್ಯದರ್ಶಿಯವರು, ಜಲ್ಲಾ ಪಾನ ಪ್ರತಿಬಂಧ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ ಪಾಯಣ್ಣನವರನ್ನು ಸೆರೆ ಕುಡಿದ ಆರೋಪಕ್ಕಾಗಿ ಪೋಲೀಸರು ಹಿಡಿದು, ಅವರ ಮೇಲೆ ಖಟ್ಲೆ ಹಾಕಿರುವರು. ಮಧ್ಯರಾತ್ರಿಯಲ್ಲಿ ಪೋಲೀಸರು ಇವರನ್ನು ಹಿಡಿದು ಹೆಸರು ಕೇಳಿದಾಗ, ಇವರು ತಮ್ಮ ಹೆಸರನ್ನು ಹೇಳದೆ ಪಾಟೀಲೆಂಬ ಖೊಟ್ಟಿ ಹೆಸರು ಹೇಳಿದ್ದರಿಂದ, ಇವರ ಮೇಲೆ ಎರಡನೇ ಖಟ್ಲೆ ಹಾಕಿರುವರೆಂದು ತಿಳಿದುಬರುತ್ತದೆ. ಮಾಜಿ ಮುಖ್ಯ ಮಂತ್ರಿಗಳ ಹೇಳಿಕೆ ಸುಳ್ಳಾಗಬಾರದೆಂಬ ಉದ್ದೇಶದಿಂದ ಕಾಂಗ್ರೆಸ್ಸಿನವರು ದಾರು ಕುಡಿದು ಪಾನ ಪ್ರತಿಬಂಧ ಸುಳ್ಳಾಗಿದೆಯೆಂದು ತೋರಿಸಿಕೊಡುತ್ತಿರುವರೆಂದು ಕೆಲವರು ಹೇಳುತ್ತಿದ್ದಾರೆ.

ಮಂಗಳೂರು—

ಗೇರುಬೀಜ ಕೆಲಸಗಾರರಿಂದ ರಿಟ್ ಅರ್ಜಿ ಕೊಡಲು ಸಂಘದ ತೀರ್ಮಾನ

ತಾ. 20—7—1958ರಂದು ಗೇರುಬೀಜ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಕೊಳ್ಳಲಾಯಿತು :

1) ಕೃಷ್ಣಾಷ್ಟಮಿಗೆ ಪ್ರತ್ಯೇಕವಾಗಿ ಎಲ್ಲಾ ಗೇರುಬೀಜ ಕಾರ್ಖಾನೆಯ ಕೆಲಸಗಾರರಿಗೆ ರೂ. 15ರಂತೆ ಅಷ್ಟಮಿ ಬೋನಸನ್ನು ಕೊಡಬೇಕು.

2) ಲೇ ಆಫ್ ವೇತನ ತೆಗೆಸಿಕೊಡುವವರೆಗೆ ಕಾನೂನು ಪ್ರಕಾರ ಸರಕಾರ ಮಾಡಬೇಕಿದ್ದ ಕರ್ತವ್ಯ ನಿರ್ವಹಣೆಯನ್ನು ಮಾಡದಿರುವ ಬಗ್ಗೆ ಕಾರ್ಯಕಾರೀ ಸಮಿತಿಯು ಮೈಸೂರು ಸರಕಾರದ ಧೋರಣೆಯನ್ನು ಖಂಡಿಸುತ್ತದೆ. ಈ ಬಗ್ಗೆ ಬೆಂಗಳೂರು ಹೈಕೋರ್ಟಿಗೆ ರಿಟ್ ಅರ್ಜಿಯನ್ನು ಸಲ್ಲಿಸುವದಕ್ಕೆ ಅಗತ್ಯವುಳ್ಳ ಕ್ರಮ ಕೈಗೊಳ್ಳಲು ಸಂಘದ ಅಧ್ಯಕ್ಷರಿಗೆ ಅಧಿಕಾರ ನೀಡಲಾಗಿದೆ.

3) ಹೆರಿಗೆ ಭತ್ತೆ ಮತ್ತು ಇತರ ಕೇಳಿಕೆಗಳ ಕುರಿತು ಮೈಸೂರು ಸರಕಾರದ ಹೊಸ ಮಜೂರ ಮಂತ್ರಿಯವರನ್ನು ಕಂಡು ಮನವಿ ಕೊಡಲು ಶಿಷ್ಟಮಂಡಳವನ್ನು ಕಳುಹಿಸಬೇಕು.

4) ಕೇರಳದಲ್ಲಿ ಗೇರುಬೀಜ ಕೆಲಸಗಾರರ ಮತ್ತು ಕೈಗಾರಿಕೆಯ ಸ್ಥಿತಿಯನ್ನು ತಿಳಿಯಲು ಕ್ವಿಲೋನಿಗೆ ಸಂಘದ ಪ್ರತಿನಿಧಿಗಳನ್ನು ಕಳುಹಿಸಬೇಕು.

5) ಕೆ. ಪಿ. ಟಿ. ಯು. ಸಿ.ಯ ವಿಸ್ತೃತ ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವುದು.

6) ಅಗ್ಗದರದ ಅಕ್ಕಿ ಅಂಗಡಿಗಳನ್ನು ಕೂಡಲೇ ಸರ್ಕಾರವು ತೆರೆಯಬೇಕೆಂದು ಬಲಪಡಿಸುತ್ತದೆ.

7) ಮಂಗಳೂರು ಮುನಿಸಿಪಲ್ ಚುನಾವಣೆಯನ್ನು ಮುಂದೂಡಬಾರದೆಂದು ನಗರಸಭೆಯನ್ನೂ, ಸರಕಾರವನ್ನೂ, ಕೇಳಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಲಾಯಿತು.

8) ಲೆಬನಾನ್‌ನಲ್ಲಿ ಅಮೇರಿಕದ ಮಿಲಿಟರಿ ಕಾರ್ಯಾಚರಣೆಯನ್ನು ಖಂಡಿಸುವ ನಿರ್ಣಯವನ್ನು ಸಭೆಯು ಮಂಜೂರು ಮಾಡಿತು.

ಫೇಕ್ಟರಿ ಕಮಿಟಿಗಳ ಮತ್ತು ಫೇಕ್ಟರಿ ಕೌನ್ಸಿಲ್‌ಗಳ ಚಟುವಟಿಕೆಯ ವರದಿಯನ್ನು ಕಾರ್ಯದರ್ಶಿಯವರು ವಿವರಿಸಿದ ಬಳಿಕ ಕಳೆದ 9 ವಾರಗಳ ಅಲ್ಪ ಸಮಯದಲ್ಲಿ 5,000ದಷ್ಟು ಮಂದಿ ಸದಸ್ಯರ ಪೂರ್ಣ ವಾರ್ಷಿಕ ಚಂದಾ ವಸೂಲಾಗಿರುವ ಬಗ್ಗೆ ಕಾರ್ಯಕಾರಿ ಸಮಿತಿಯು ಕಾರ್ಯಕರ್ತರಿಗೆ ಅಭಿನಂದಿಸಿತಲ್ಲದೆ ಸಂಘದ ಚಟುವಟಿಕೆಯನ್ನು ಇನ್ನಷ್ಟು ಬಲಗೊಳಿಸಬೇಕೆಂದು ವಿನಂತಿಸಲಾಯಿತು.

ಎಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಮಧುಗಿರಿ ಸಬ್ ಡಿವಿಜನ್ ಆಫೀಸರ್

ಮಧುಗಿರಿ ಸಬ್‌ಡಿವಿಜನ್‌ಗೆ ಹಾಲಿ ಇರುವ ಸಬ್‌ಡಿವಿಜನ್ ಆಫೀಸರ್ ಬಂದು ಮೂರು ವರ್ಷಗಳಾದುವು. ಆಗಲೇ ಒಂದು ಸಲ ವರ್ಗವಾಗಿದ್ದರೂ ಹೋಗಲು ಮನಸ್ಸಿಲ್ಲದೆ ಪ್ರಭಾವ ಬೀರಿ ಇಲ್ಲೇ ಉಳಿದಿದ್ದಾರೆ.

● ಇವರು ನೋಡಲು ಸಭ್ಯಹಸು. ಆದರೆ ಒಳಗೆ ವ್ಯಾಘ್ರ ಎಂಬುದು ಇಲ್ಲಿಯ ಜನಗಳಿಗೆಲ್ಲ ಈಗ ಗೊತ್ತಾಗಿ ಬಿಟ್ಟಿದೆ.

ಪಾರ್ಟಿಗಳಲ್ಲಿ ಸೇರಿಕೊಂಡು, ಪುಢಾರಿಗಳೊಡನೆ ಗೆಳೆತನ ಬೆಳೆಸಿ ಏನುಬೇಕಾದ್ದನ್ನು ಮಾಡುತ್ತಿದ್ದಾರೆ.

● ತಾ. 6—3—58ರಂದು ಡಿವಿಜನಲ್ ಕಮಿಷನರ್‌ರವರ ಎದುರು ಇವರ ನಡವಳಿಕೆಗಳನ್ನೆಲ್ಲ ಮುಖಾಮುಖಿ ಹೇಳಿದರೂ ಏನಾಗಲಿಲ್ಲ ಈಗ ಯಾರಾದರೂ ವಿಚಾರಣೆ ನಡೆಸಿದರೆ ಇವರ ಸ್ವೇಚ್ಛಾ ಪ್ರವರ್ತನೆಯ ಹಾಗೂ ಪಕ್ಷಪಾತೀ ಕಾರ್ಯಗಳನ್ನು ರುಜುವಾತುಪಡಿಸಲು ಸಿದ್ಧನಿದ್ದೇನೆ.

● ಇತ್ತೀಚೆಗೆ ಈ ಸಬ್‌ಡಿವಿಜನ್ನಿನ ಪರೊಬ್ಬರು ಸಚಿವರಾದ ಮೇಲೆ ಈ ಆಫೀಸರ ವರ್ತನೆ ವರ್ಣಾತೀತವಾಗಿದೆ, ಅಸಹನೀಯವಾಗಿದೆ. ಇವರನ್ನು ಬೇರೆ ಕಡೆಗೆ ಹೊತ್ತಿಹಾಕದಿದ್ದರೆ ಈ ವಿಭಾಗದ ಜನರಿಗೆ ಮುಕ್ತಿಯಿಲ್ಲ.

—ಕೆ. ನಂಜುಂಡರಾವ್, ಪಾವಗಡ

ದಾವಣಗೆರೆಯ ದಫೇದಾರ

ದಾವಣಗೆರೆ ಪೋಲೀಸರು ಲಂಚ ತೆಗೆದುಕೊಳ್ಳುವದರಲ್ಲಿ ನಿಸ್ಸೀಮರಾಗಿದ್ದಾರೆ. ಅವರಲ್ಲಿ ದಫೇದಾರ್‌ರೊಬ್ಬರಂತೂ ಎಲ್ಲೆ ಮೀರಿ ವರ್ತಿಸುತ್ತಿದ್ದಾರೆ. ಇವರ ಉಪಟಳ ಹೇಳಲಾಸಲ್ಲ. ಇವರ ಮಾದರಿ ನೋಡಿ:

● ವೇಗದಲ್ಲಿ ಹೋಗುತ್ತಿದ್ದ ಲಾರಿಗಳನ್ನು ತನ್ನ ಸೈಕಲ್ಲಿನಿಂದ ಅಡ್ಡ ಗಟ್ಟಿ ಡ್ರೈವರನನ್ನು ದೂರ ಕರೆದುಕೊಂಡು ಹೋಗಿ ಹಣ ಕಸಿಯುತ್ತಾರೆ.

ಲಂಚ—ಹಿಂಸೆ

● ವರ್ತಕರ ಬಳಿ ಹೋಗಿ "ಎರಡು ರೂಪಾಯಿ ಕೊಡಿ, ಆಮೇಲೆ ಕೊಡುತ್ತೇನೆ" ಎಂಬ ಇವರ ಮಾತಿಗೆ ನಂಬಿ ಹಣ ಕಳೆದುಕೊಳ್ಳುತ್ತಿರುವ ವರ್ತಕರು ಬೇಕಾದಷ್ಟು ಜನ ಇರುವರು.

● ಸೋಪು ಮಾರುವವರ ಹತ್ತಿರ ಹೋಗಿ "ಪಿ ಎಸ್.ಪಿ. ಸಾಹೇಬರು ಹೇಳಿದ್ದಾರೆ, ಸೋಪು ಕೊಡಿ" ಎಂದು ಹೇಳಿ ಅದಕ್ಕೆ ಹಣವನ್ನೇ ಕೊಡುವುದಿಲ್ಲ.

● ಭಟ್ಟೀ ಸರಾಯಿ ಮಾಡುವುದು, ಮಾರುವುದು ಅಪರಾಧವೆಂದು ಪೋಲೀಸ್ ಅಧಿಕಾರಿಗಳು ಹೇಳುತ್ತಿದ್ದರೆ ಇವರಿಗೆ ಸರಾಯಿ ಮಾರುವವರ ಮನೆಗಳೇ ಲಕ್ಷ್ಮೀ ನಿವಾಸವಾಗಿವೆ. ಡ್ರೆಸ್‌ನಲ್ಲೇ ಹೋಗಿ ಪ್ರತಿ ದಿನವೂ ಅವರಿಂದ ಮಾಮೂಲಿ ವಸೂಲು ಮಾಡುತ್ತಾರೆ.

ಹೀಗಾದರೆ ದೇಶ ಹೇಗೆ ಸುಧಾರಿಸೀತು ?

—ಓರ್ವ ನಾಗರಿಕ, ದಾವಣಗೆರೆ

[ಅಗತ್ಯವೆನಿಸಿದರೆ ದಫೇದಾರರ ಪೂರ್ಣ ಹೆಸರನ್ನು ಅವರ ಇನ್ನಿತರ ವ್ಯವಹಾರಗಳನ್ನು ಪ್ರಕಟಿಸಲಾಗುವುದು]

ವಿಠಲನನ್ನು ಜಾನುವಾರದಂತೆ ಹೊಡೆದಿದ್ದಾರೆ

ತೀರ್ಥಹಳ್ಳಿಯ ಶ್ರೀಮಂತ ಸೋದರರಿಬ್ಬರು ತಮ್ಮ ಹೋಟೆಲಿನಲ್ಲಿ ಹತ್ತು ವರುಷಗಳಿಂದ ರಕ್ತಬಸಿಯುತ್ತಿದ್ದ ವಿಠಲನೆಂಬ 17 ವರುಷದ ನಿರ್ಗತಿಕ ಯುವಕನನ್ನು ಜಾನುವಾರಗಳನ್ನು ಥಳಿಸುವ 3 ಬಾರು ಕೋಲುಗಳಿಂದ ಚೆನ್ನಾಗಿ ಥಳಿಸಿ ಜಖಂ ಪಡಿಸಿರುತ್ತಾರೆ. ಇದೇ ಹೋಟಿಲಿನಲ್ಲಿ ವಸತಿ ಮಾಡಿಕೊಂಡಿರುವ ವೆಟರಿನರಿ ಕಾಂಪೌಂಡರ್ ಸೀತಾರಾಮಯ್ಯ, ಹೋಟಿಲ್ ಅಡಿಗೆ ಕೆಲಸದ ಯಜ್ಞನಾರಾಯಣ ಹೆಬ್ಬಾರ ಮತ್ತು ಹೋಟಿಲ್ ಮಾಲೀಕರು ಇವರೆಲ್ಲ ಸೇರಿಕೊಂಡು 17-7-58ರ ರಾತ್ರಿ ಬಲಾತ್ಕಾರದಿಂದ ಕೋಣೆಯಲ್ಲಿ ತಳ್ಳಿ ಕ್ರೂರ ಹಿಂಸೆಗೊಳಪಡಿಸಿದರು. ವಿಠಲ ಮಾರನೆಯ ದಿನದಿಂದ ಕಣ್ಮರೆಯಾಗಿದ್ದಾನೆ.ಈ "ಯುವಕ ಕಾರ್ಮಿಕನು ನಿರಪರಾಧಿಯಾಗಿದ್ದು ಈ ದೌರ್ಜನ್ಯ ಕೃತ್ಯಕ್ಕೆ ಮಾಲೀಕರ ಸಂಬಂಧದ ವಿವಾಹಿತ ಮಹಿಳೆಯೇ ಕಾರಣ. ಅದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಬಳಿ ಇವೆ. ಯುವಕನನ್ನು ಪತ್ತೆ ಹಚ್ಚಿ ಕೊಡದಿದ್ದರೆ ಪೋಲಿಸ

(೯ನೇ ಪುಟ ನೋಡಿ)

ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪದ ತೀವ್ರ ಖಂಡನೆ

ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಭಾರೀ ಸಭೆ

ಕನ್ನಡ ಸಾಹಿತ್ಯ ಪರಿಷತ್ ಮಂದಿರದಲ್ಲಿ ಭಾನುವಾರ ತಾ|| 27—7—58 ರಂದು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಸಭೆ ನಡೆಯಿತು.

ಕಾಂ. ಸಿ. ಬಿ. ಮೋಟಯ್ಯ ಅಡ್ವೋಕೇಟ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಪ್ರಾಂತ ಸಮಿತಿಯ ಸದಸ್ಯರೂ, ಭಾರತ ಕಮ್ಯೂನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಲಿಯ ಸದಸ್ಯರೂ ಆದ ಕಾಂ. ಬಿ. ವಿ. ಕಕ್ಕಿಲ್ಲಾಯರು ಮಧ್ಯಪ್ರಾಚ್ಯದ ಇಂದಿನ ಪರಿಸ್ಥಿತಿಯ ಬಗ್ಗೆ ಮಾತನಾಡಿ, ಸಾಮ್ರಾಜ್ಯಶಾಹಿಗಳು ಇಂದು ಲೆಬನಾನ್, ಜೋರ್ಡಾನ್ ಹಾಗೂ ಇತರ ಅರಬ್ ರಾಷ್ಟ್ರಗಳಲ್ಲಿನ ಜನತೆಯ ಸ್ವಾತಂತ್ರ್ಯಕಾಂಕ್ಷೆಗಳನ್ನು ತುಳಿಯಲೂ ವಿಶ್ವಶಾಂತಿಯನ್ನು ಕದಡಲೂ ಪ್ರಯತ್ನಿಸುತ್ತಿರುವುದನ್ನು ಖಂಡಿಸಿದರು. ಜಗತ್ತಿನ ಎಲ್ಲಾ ಜನತೆಯೂ ಇಂದು ಸಾಮ್ರಾಜ್ಯಶಾಹಿಗಳ ಈ ದುರಾಕ್ರಮಣವನ್ನು ಖಂಡಿಸುತ್ತಿವೆ. ಕರ್ನಾಟಕದ ಎಲ್ಲಾ ಜನವಿಭಾಗಗಳು ಕೂಡಾ ಈ ದುರಾಕ್ರಮಣವನ್ನು ಸಭೆ, ಪ್ರದರ್ಶನ ಮತ್ತು ಮನವಿಗಳ ಮೂಲಕ ಖಂಡಿಸಬೇಕೆಂದು ಕೇಳಿಕೊಂಡರು.

ನಂತರ ಕರ್ನಾಟಕ ಪ್ರಾಂತ ಸಮಿತಿ ಕಾರ್ಯದರ್ಶಿಗಳೂ, ಪಾರ್ಟಿಯ ರಾಷ್ಟ್ರೀಯ ಮಂಡಲಿಯ ಸದಸ್ಯರೂ ಆದ ಕಾಂ. ಎನ್. ಎಲ್. ಉಪಾಧ್ಯಾಯರು ಪಾರ್ಟಿಯ ಅಮೃತಸರ ಅಧಿವೇಶನದಲ್ಲಿ ಅಂಗೀಕರಿಸಲಾದ ಗೊತ್ತುವಳಿಯ ಬಗ್ಗೆ ಮಾತನಾಡಿದರು. ಇಂದು ದೇಶದಾದ್ಯಂತ ಹೆಚ್ಚು ಹೆಚ್ಚು ಜನವಿಭಾಗಗಳು ಕಮ್ಯೂನಿಸ್ಟ್ ಪಾರ್ಟಿಯ ನಾಯಕತ್ವವನ್ನು ಅಂಗೀಕರಿಸಲು ಸಿದ್ಧವಿರುವುದಾಗಿಯೂ, ಎಂದಿಗಿಂತಲೂ ಇಂದು ಪಾರ್ಟಿಯು ಹೆಚ್ಚು ಸಂಘಟಿತವಾಗಿ ಬೆಳೆದು ಬಂದಿದೆಯೆಂದೂ ಕಾಂ. ಉಪಾಧ್ಯಾಯರು ತಿಳಿಸಿದರು.

ಕಾಂ. ಸಿ. ಬಿ. ಮೋಟಯ್ಯನವರು ಮಂಡಿಸಿದ ಲೆಬನಾನ್ ಜೋರ್ಡಾನ್‌ಗಳಲ್ಲಿ ನಡೆದ ಆಂಗ್ಲೋ–ಅಮೇರಿಕನ್ ಆಕ್ರಮಣವನ್ನು ಖಂಡಿಸುವ, ಭಾರತವು ನೇರವಾಗಿ ಖಂಡಿಸಬೇಕೆಂಬ ಹಾಗೂ ಶೃಂಗಸಮ್ಮೇಳನ ನಡೆಯಲು ಒತ್ತಾಯ ತರಬೇಕೆಂದು ನಿರ್ಣಯವು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕೃತವಾಯಿತು.

ಪಾರ್ಟಿಯ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾಂ. ಸೂರ್ಯನಾರಾಯಣರಾವ್ ವಂದನಾರ್ಪಣೆಯ ಬಳಿಕ ಸಭೆ ಮುಕ್ತಾಯವಾಯಿತು.

ನಿರೀಕ್ಷೆಗೆ ಮೀರಿ ಜನಸಮೂಹ ಸೇರಿದುದು ಅನೇಕರಿಗೆ ವಿಸ್ಮಯವನ್ನುಂಟುಮಾಡಿತ್ತು. ಪರಿಷತ್ತಿನ ಒಳಗೂ ಹೊರಗೂ ಜನ ಕಿಕ್ಕಿರಿದು ನಿಂತಿದ್ದರು.

ಲಂಚ — ಹಿಂಸೆ

(೮ನೇ ಪುಟದಿಂದ)

ರಿಗೆ ದೂರು ಕೊಡಲಾಗುವುದು" ಎಂದು ಮಾಜೀ ಪೌರ ಸಭಾಧ್ಯಕ್ಷ ಸಿ. ಕೆ. ಜನಾರ್ದನ್ ನಾಯಕ್ ತಿಳಿಸಿ ವಿಫಲರಾಗಿ ಇದೀಗ ದಾಖಲೆಗಳ ಸಮೇತ ದೂರು ಕೊಟ್ಟಿರುತ್ತಾರೆ.

ಮಲೆನಾಡಿನಲ್ಲಿ ಕಾರ್ಮಿಕರ ಸಂಸಾರಗಳು ಇನ್ನೂ ದುಸ್ಥಿತಿಗಿಳಿದಿವೆ. ಕಾಫೀ ತೋಟಗಳಲ್ಲಿಯ ಹಿಂಸಾಕೃತ್ಯಗಳಿಗೆ ಮಿತಿಯೇ ಇಲ್ಲದಾಗಿದೆ. ಕಾರ್ಮಿಕರು ಸಂಘಟಿತರಾಗುವದೊಂದೇ ಮುಕ್ತಿಯ ದಾರಿ.

"ಸತ್ಯಸಂಗತಿ ಬಲ್ಲವ" ತೀರ್ಥಹಳ್ಳಿ

'ನ್ಯೂ ಗದಗ್ ರೆಸ್ಟಾರೆಂಟ್' ನಲ್ಲಿ ಹಿಂಸೆ

ದೊಡ್ಡಬಳ್ಳಾಪುರದ ನ್ಯೂ ಗದಗ್ ರೆಸ್ಟಾರೆಂಟಿನ ಮಾಲೀಕರು 18-7-58 ರಂದು ಬೆಳಿಗ್ಗೆ ಭೋಜು ಎಂಬ ಕೆಲಸಗಾರನನ್ನು ಸಿಕ್ಕಾಪಟ್ಟೆ ಹೊಡೆದು ಹೊರಗೆ ದಬ್ಬಿದರು. ಭೋಜು ಬೆಂಗಳೂರು ಜಿಲ್ಲಾ ಕ್ಯಾಂಟೀನ್ ಹೋಟೆಲ್ ಕೆಲಸಗಾರ ಸಂಘದ ದೊಡ್ಡಬಳ್ಳಾಪುರ ಶಾಖೆಗೆ ದೂರಿತ್ತ ಕೂಡಲೇ ಕಾರ್ಯದರ್ಶಿ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಮಾಲೀಕರಿಗೆ ವಿನಂತಿಸಿ ಕೊಂಡರು. "ಇಲ್ಲೂ ಸೇರಿಸುವುದಿಲ್ಲ, ಬೇರೆ ಹೋಟೆಲುಗಳಲ್ಲೂ ಸೇರಲು ಅವಕಾಶ ಕೊಡುವುದಿಲ್ಲ" ಎಂದರು ದರ್ಪದಿಂದ.

ದೊಡ್ಡಬಳ್ಳಾಪುರದಲ್ಲಿ ಈ ಹೋಟೆಲು ಮಾಲೀಕರು ಕೆಲಸಗಾರರನ್ನು ಯಾವಾಗಲೂ ಹೊಡೆಯುವ ಪರಿಪಾಠವನ್ನಿಟ್ಟುಕೊಂಡಿದ್ದಾರಲ್ಲದೆ ಬೆಳಗಿನ 5 ಗಂಟೆಯಿಂದ ರಾತ್ರಿ 11 ಗಂಟೆಯ ವರೆಗೂ ದುಡಿಸುತ್ತಾರೆ.

ಈ ಬಡ ಹೋಟೆಲು ಕೆಲಸಗಾರರಿಗೆ ಕಾನೂನು ಪ್ರಕಾರ ಸೌಲಭ್ಯಗಳನ್ನು ಸರಕಾರ ಕಲ್ಪಿಸಿಕೊಟ್ಟೀತೆ?

ಎಂ. ನಾರಾಯಣಪ್ಪ
ದೊಡ್ಡಬಳ್ಳಾಪುರ

ತುಮಕೂರು—

ಬೀಡಿ ಕೆಲಸಗಾರರ ಸಂಘದ ಸ್ಥಾಪನೆ

ತಾ. 20—7—58ರ ಸಂಜೆ ತುಮಕೂರು ಬೀಡಿ ಕೆಲಸಗಾರರು ಕೆ. ಮಲ್ಲಣ್ಣ ಬಿ.ಎ.,ಬಿ.ಎಲ್.ರವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ತುಮಕೂರು ಜಿಲ್ಲಾ ಬೀಡಿ ಕೆಲಸಗಾರರ ಸಂಘವನ್ನು ಸ್ಥಾಪಿಸಿದರು. ಸಂಘಕ್ಕೆ ಕೆ. ಮಲ್ಲಣ್ಣ ಮತ್ತು ಅಬ್ದುಲ್ ರಷೀದ್‌ರವರುಗಳನ್ನು ಅಧ್ಯಕ್ಷರುಗಳನ್ನಾಗಿಯೂ, ಕೆ. ಆರ್. ನಾಯಕ್, ದಸ್ತಗೀರ್ ಸಾಹೇಬ್‌ರವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ, ಮೆಹಬೂಬ್ ಬಾಷಾರವರನ್ನು ಖಜಾಂಚಿಗಳನ್ನಾಗಿಯೂ ಮತ್ತು 11 ಮಂದಿಗಳನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಿ, ಆದಷ್ಟು ಜಾಗ್ರತೆ ಸಂಘವನ್ನು ರಿಜಿಸ್ಟರ್ಡ್ ಮಾಡಿಸಬೇಕೆಂದೂ ತೀರ್ಮಾನ ಮಾಡಲಾಯಿತು.

ಕೆಲಸಗಾರರ ಸಂಘಟನೆಯ ಬಗ್ಗೆ ಕಾ| ಮಂಜುನಾಥ್‌ರವರು ಮಾತನಾಡಿದ ನಂತರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮಂಗಳೂರು ವಾರ್ತೆ

ಜಿಲ್ಲಾಬೋರ್ಡ್ ಅಧ್ಯಾಪಕರ ಚಳವಳಕ್ಕೆ ಸರಕಾರ ಬಗ್ಗಿತು

ಕಳೆದವಾರ ಜನಶಕ್ತಿಯಲ್ಲಿ ವರದಿಯಾದಂತೆ ದ.ಕ. ಜಿಲ್ಲಾ ಬೋರ್ಡಿನ ಕೈಕೆಳಗೆ ದುಡಿಯುವ 3000ಮಂದಿ ಅಧ್ಯಾಪಕರುಗಳಿಗೆ ಕಳೆದ ಮೂರು ತಿಂಗಳಿನಿಂದ ಸಂಬಳ ಕೊಡದೆ ಬಾಕಿಮಾಡಿ ಕೊಳ್ಳಲಾಗಿತ್ತಷ್ಟೆ!

ಸರಕಾರದ ಈ ಅಲಕ್ಷ್ಯ ಧೋರಣೆಯನ್ನು ಕಂಡು ಜಿಲ್ಲೆಯ ಅಧ್ಯಾಪಕರೂ, ಅವರ ಸಂಘಗಳೂ ಸುಮ್ಮನೆ ಕುಳಿತಿರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೂ ಮಂತ್ರಿಗಳಿಗೂ ತಂತಿ ಪತ್ರಗಳ ಮೂಲಕ ಮನವಿ ಮಾಡಿಕೊಂಡರು. ಭೇಟಿ ಮಾಡಿದರು. ಆದರೂ ನಿರೀಕ್ಷಿಸಿದ ಪರಿಣಾಮವಾಗಲಿಲ್ಲ.

ಕೊನೆಗೆ ದ.ಕ. ಜಿಲ್ಲಾ ಅಧ್ಯಾಪಕರ ಸಂಘದ ಕಾರ್ಯದರ್ಶಿ ಶ್ರೀ ಕೆ. ದಾಸಪ್ಪನವರು ಸರಕಾರಕ್ಕೊಂದು ಪತ್ರ ಬರೆದು ತಾ. 22-7-58ರೊಳಗಾಗಿ ಈ ಅಧ್ಯಾಪಕರ ಸಂಬಳ ವಿತರಣೆ ಮಾಡದಿದ್ದರೆ ತಾನು ಆಮರಣ ಉಪವಾಸ ಕೈಗೊಳ್ಳುವುದಾಗಿ ಎಚ್ಚರಿಸಿದರು ಸರಕಾರಕ್ಕೆ ಕೊಟ್ಟ ಈ ಮುನ್ನೆಚ್ಚರಿಕೆಯನ್ನು ಸಮರ್ಥಿಸಿ 13-7-58ರಲ್ಲಿ ಸೇರಿದ ಪುತ್ತೂರು ಬೆಳ್ತಂಗಡಿ ತಾಲ್ಲೂಕು ಪ್ರಾಥಮಿಕ ಅಧ್ಯಾಪಕ ಸಂಘ ಕೌನ್ಸಿಲ್ ತಾ. 23ರಂದು ಎಲ್ಲ ಅಧ್ಯಾಪಕ ಅಧ್ಯಾಪಿಕೆಯರೂ ಒಂದು ದಿನದ ಸಾಮೂಹಿಕ ಉಪವಾಸವನ್ನು ಕೈಗೊಳ್ಳಬೇಕೆಂದು ಕರೆಕೊಟ್ಟರು.

ಹೀಗೆ ಅಧ್ಯಾಪಕರೂ ಅವರ ಸಂಘಗಳೂ ತಮ್ಮ ಐಕ್ಯದ ಶಕ್ತಿಯನ್ನು ಪ್ರದರ್ಶಿಸಿದ ನಂತರ ಇನ್ನು ಅಸಡ್ಡೆ ವಹಿಸಿದರೆ ಪರಿಣಾಮ ಕೆಟ್ಟೀತು ಎಂದು ತಿಳಿದ ಮೈಸೂರು ಸರಕಾರ ಕಳೆದ ತಾ. 19ರಂದು ಈ ಸಂಬಳದ ಬಗ್ಗಿನ ಗ್ರಾಂಟನ್ನು ಕೂಡಲೇ ಕೊಡುವಂತೆ ಆಜ್ಞೆ ಹೊರಡಿಸಿದೆ. ಅಧ್ಯಾಪಕರ ವೇತನ ವಿತರಣೆ ನಡೆದಿದೆ.

ಹೀಗೆ ಅಧ್ಯಾಪಕರ ಸಂಘಟಿತ ಚಳುವಳಕ್ಕೆ ಸರಕಾರ ಶರಣಾಗತವಾಗಬೇಕಾಯಿತು. ಇದು ತಮ್ಮ ಐಕ್ಯ ಶಕ್ತಿಯ, ಹೊಸ ವಿಜಯವೆಂದು ಅಧ್ಯಾಪಕ ವರ್ಗದಲ್ಲಿ ಜಾಗೃತಿಯುಂಟಾಗಿದೆ.

ಬೀಡಿ ಕಂಟ್ರಾಕ್ಟರರ ಸೋಲು ಮಜೂರರೊಬ್ಬರ ವಿಜಯ

ಬಂಟ್ವಾಳ ಪಂಚಾಯಿತ್ ಚುನಾವಣೆ

ಬಂಟ್ವಾಳದ ಮೇಜರ್ ಪಂಚಾಯತ್ ಬೋರ್ಡಿನ ಚುನಾವಣೆಯು ಇತ್ತೀಚೆಗೆ ನಡೆಯಿತು. ಅದರಲ್ಲಿ ರೈತ ಮಜೂರರ ಸಂಘಟನೆಯ ಮೂವರು ಕಾರ್ಯಕರ್ತರು ಸ್ಪರ್ಧಿಸಿದ್ದು ಮೂವರೂ ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದಾರೆ. ಎರಡನೇ ವಾರ್ಡಿನಿಂದ ರೈತ ಸಂಘದ ಕಾರ್ಯಕರ್ತ ಶ್ರೀ ಕೊರಗ ಪೂಜಾರಿ, ಮೂರನೆಯ ವಾರ್ಡಿನಿಂದ ಬೀಡಿ ಮಜೂರರ ಸಂಘದ ಕಾರ್ಯಕರ್ತರಾದ ಶ್ರೀ ಮಂಜುನಾಥ ಸಪಲ್ಯ ಮತ್ತು ಶ್ರೀ ಟಿ. ಲಿಂಗಪ್ಪ ಇವರು ಚುನಾಯಿಸಲ್ಪಟ್ಟಿದ್ದಾರೆ. ಇದರಲ್ಲಿ ಗಮನೀಯ ಅಂಶವೆಂದರೆ ಗಣೇಶ ಬೀಡಿ ಕಂಪೆನಿಯ ಕಂಟ್ರಾಕ್ಟರ್ ಶ್ರೀ ಬಿ. ಎಚ್. ಆದಮ್ ಸಾಹೇಬರನ್ನು ಸೋಲಿಸಿ ಬೀಡಿ ಮಜೂರರಿಬ್ಬರು ಆರಿಸಿ ಬಂದುದು!

ದುರಾಕ್ರಮಣದ ವಿರುದ್ಧ ಖಂಡನೆ—ಪ್ರತಿಭಟನೆ

ಮಂಗಳೂರು: ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯ ಕರೆಯಂತೆ ಕಳೆದ ೨೦ರಂದು ಅರಬ್ ರಾಷ್ಟ್ರಗಳಲ್ಲಿ ಯುದ್ಧಕೋರರು ನಡೆಸಿದ ನಗ್ನ ಆಕ್ರಮಣವನ್ನು ಖಂಡಿಸಿ ಅರಬ್ ರಾಷ್ಟ್ರಗಳಿಂದ ವಿದೇಶಿ ಸೈನ್ಯ ಕಾಲ್ತೆಗೆಯಬೇಕೆಂದೂ ಶಾಂತಿ-ಸ್ಥಾಪನೆಗೆ ಪಂಚ ಮಹಾರಾಷ್ಟ್ರಗಳ ಶೃಂಗಸಭೆ ಸೇರಬೇಕೆಂದೂ ಮಂಗಳೂರಿನಲ್ಲಿ ಭಾರೀ ಮತ-ಪ್ರದರ್ಶನ-ಸಭೆಗಳು ನಡೆದುವು. ಸಭಾಧ್ಯಕ್ಷತೆಯನ್ನು ಕಾಂ. ಎ. ಶಾಂತಾರಾಂ ಪೈಯವರು ವಹಿಸಿದ್ದರು.

ನೀವೇನು ಹೇಳುತ್ತೀರಿ?

(೫ನೇ ಪುಟದಿಂದ)

ಧನೆಗೆ ವಿರುದ್ಧವಾಗಿ (ಕಾಗದದಲ್ಲಿ ತೋರಿಸಿದಂತೆ) ಹೆಚ್ಚಾಗಿದ್ದು ರೂ. 10,000 ಗಳಷ್ಟಿದೆ, ಅಂದರೆ ಅದರರ್ಥ ಇಷ್ಟೆ ಹೆಚ್ಚು ಸಾಲಗಳನ್ನು ಪಡೆಯಬೇಕೆಂಬುದೇ.

● ಹರಿಪ್ರಸಾದ ಯಾದವ ಮತ್ತು ಅವರ ಪತ್ನಿ ಸಂಘದ ನಿಯಮಕ್ಕೆ ವಿರುದ್ಧವಾಗಿ ಹೆಚ್ಚು ಸಾಲ ಪಡೆದಿದ್ದಾರೆ.

● ಹಣಪಡೆದುದಕ್ಕಾಗಿ ರಸೀದಿಗಳನ್ನು ಕೊಡಲಾಗಿದೆ. ಆದರೆ 'ಕ್ಯಾಷ್ ಬುಕ್'ನಲ್ಲಿ ಅಥವಾ ಲೆಡ್ಜರ್‌ನಲ್ಲಿ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿಲ್ಲ. ಇಂಥವು ನೂರಾರು ಇವೆ.

● **ಕ್ಯಾಷ್ ಬುಕ್‌ನ ೧೮ನೆಯ ಪುಟದಲ್ಲಿ ಶ್ರೀ ಹರಿಪ್ರಸಾದ್‌ಯಾದವ್‌ರ ಪತ್ನಿ ಶ್ರೀಮತಿ ಹಂಸಾವತಿದೇವಿ ಯಾದವ್ ಅವರಿಂದ ರೂಪಾಯಿ ೩೫೦ಗಳ ಜಮಾ ಇದೆ. ಆದರೆ ಶ್ರೀಮತಿ ಹಂಸವತಿದೇವಿಯುವರ ಲೆಡ್ಜರ್ (ಪುಟ ೪೬)ನಲ್ಲಿ ಇಂಥ ಜಮಾಇಲ್ಲ.**

ಇದೇ ತಾರೀಕಿನಂದು ಶ್ರೀ ಬೋಶ್ ಲಾಲ್ ಮನೇರಿಯಾ ಅವರ ಲೆಡ್ಜರ್ (೯೯)ನಲ್ಲಿ ರೂ. ೩೫೦ ಜಮಾ ತೋರಿಸಲ್ಪಟ್ಟಿದೆ. ಕ್ಯಾಷ್ ಬುಕ್‌ನಲ್ಲಿ ಮೂಲ 'ಎಂಟ್ರಿ' ಶ್ರೀ ಬೋಶ್‌ಲಾಲ್ ಮನೇರಿಯಾ ಅವರ ಹೆಸರಿನಲ್ಲಿದೆ. ಆದರೆ ಅದನ್ನು ಒರೆಸಿಹಾಕಿ ಶ್ರೀಮತಿ ಹನ್ಸವತಿದೇವಿಯ ಹೆಸರನ್ನು ಬರೆಯಲಾಗಿದೆ. ಕ್ಯಾಷ್ ಬುಕ್‌ದಲ್ಲಾದ ಈ ಬದಲಾವಣೆ ಅಥವ 'ಸರಿಪಡಿಕೆ' ನಡೆದುದು ಯಾರಿಂದಲೂ ಅಲ್ಲ, ಶ್ರೀ ಹರಿಪ್ರಸಾದ್ ಯಾದವ್ ಅವರಿಂದಲೇ.

ಈ ವಿಷಯವನ್ನು 'ನ್ಯೂ ಏಜ್' ಪತ್ರಿಕೆ ಪ್ರಕಟಿಸಿದೆ. ಇಂಥ ಶುದ್ಧ ಲುಚ್ಚಾತನದ ಒಂದು ಸೊಸೈಟಿಯೊಂದರಲ್ಲಿ ನಡೆದಿದ್ದರೂ ಈ ಮಹನೀಯರ ಮೇಲೆ ಈ ವರೆಗೂ ಯಾವ ಕ್ರಮಗಳನ್ನೂ ತೆಗೆದುಕೊಳ್ಳಲಾಗಿಲ್ಲವಂತೆ. ಎಂ.ಎಲ್.ಎ. ಸದಸ್ಯತ್ವವೂ ರದ್ದಾಗಿದೆ, ಪೋಲೀಸರ ಕೈಗೂ ಒಪ್ಪಿಸಲಾಗಿತ್ತು. ಆದರೆ ತನಿಖೆ ಮಾತ್ರ ನಡೆಯಲಿಲ್ಲ, ನಡೆದಿಲ್ಲ. ಯಾಕೆಂದರೆ ಕಾಂಗ್ರೆಸ್ ಎಂ. ಎಲ್. ಎ.ಗಳು ಸಿಕ್ಕಿಹಾಕಿಕೊಂಡಿರುವ ಇಂಥ ಸೊಸೈಟಿ ಇನ್ನೂ ಹಲವೆಡೆ ಇವೆ.

ಇದಕ್ಕೆ ನೀವೇನಾದರೂ ಹೇಳುತ್ತೀರಾ?

ಕೇರಳದಲ್ಲಿ ಪ್ರತಿಪಕ್ಷಗಳ ಸಂಚು-ಹಿಂಸಾನೀತಿ

(ಮೊದಲನೇ ಪುಟದಿಂದ)

ನಡೆಸಿದರು. ವಿದ್ಯಾ ಮಸೂದೆಗೆ ವಿರೋಧವಾದ ಚಳುವಳಿ ಮತ್ತು ಲಾಥಿಧಾರಿ "ಸ್ವಯಂ ಸೇವಕ" ರ ಮತ ಪ್ರದರ್ಶನ, ಪೋಲೀಸರ ಮೇಲೆ ಅಲ್ಲಲ್ಲಿ ಹಲ್ಲೆ ನಡೆಸುವುದರಿಂದೊಡಗೂಡಿದ 'ಕಟ್ಟಾಂಪಳ್ಳಿ ಸಮರ', ಮಂತ್ರಿಗಳ ಕಾರುಗಳನ್ನು ತಡೆಯುವುದು, ಕಲ್ಲು ಹೊಡೆಯುವುದು, ಕೊಲೆ ಮಾಡುವ (ಮುಂಡಶ್ಶೇರಿಯವರನ್ನು) ಯತ್ನ ನಡೆಸುವುದು, ಕಮ್ಯೂನಿಸ್ಟ್ ಎಂ. ಎಲ್. ಎ. ಗಳನ್ನು ಲಂಚಕೊಟ್ಟು ಕೊಂಡುಕೊಳ್ಳುವುದಕ್ಕೆ ಪ್ರಯತ್ನಿಸುವುದೇ ಮೊದಲಾದ ಮಾರ್ಗಗಳಿಗೆ ಈ ಪ್ರತಿ ಪಕ್ಷಗಳ ನಾಯಕರು ಇಳಿದರು. ಹೇಗಾದರೂ ಮಾಡಿ ಲಾಥಿ ಮತ್ತು ಬಂದೂಕು ಉಪಯೋಗಿಸುವಂತೆ ಸರಕಾರವನ್ನು ನಿರ್ಬಂಧಿಸಬೇಕೆಂಬುದೇ ಈ ಪ್ರತಿಪಕ್ಷ ನಾಯಕರ ಸತತ ಪ್ರಯತ್ನವಾಗಿತ್ತು. 15 ತಿಂಗಳುಗಳಲ್ಲಿ ಅದೊಂದೂ ಫಲಿಸಲಿಲ್ಲ. ತಾವು ಚುನಾಯಿಸಿದ ಸರಕಾರವನ್ನು ಬಲಾತ್ಕಾರದಿಂದಲೋ ಕೇಂದ್ರದ ಮೂಲಕವೋ ಉರುಳಿಸಲು ಬಿಡಲಾರೆವೆಂದು ಜನತೆ ನಿರ್ಧರಿಸಿದ್ದರಿಂದ ಈ ತಂತ್ರಗಳೆಲ್ಲ ಸೋತುಹೋದುವು. ದೇವಿಕುಳಂ ಚುನಾವಣೆಯಲ್ಲಿ ಜನರು ಕಮ್ಯೂನಿಸ್ಟ್ ಉಮೇದುವಾರರನ್ನು ಮತ್ತೊಮ್ಮೆ ಆರಿಸಿ ಪ್ರತಿ ಪಕ್ಷಗಳಿಗೆ ಬುದ್ಧಿ ಕಲಿಸಿದರು.

ನಿರಾಶೆಯಿಂದ ಗಲಭೆಗೆ

ಪ್ರತಿಪಕ್ಷಗಳು ಜನರ ಬೆಂಬಲವನ್ನು ಕಳೆದುಕೊಳ್ಳುತ್ತಿವೆ. ಸರಕಾರವು ಅನೇಕ ಆದರ್ಶ ಶಾಸನಗಳ ಮತ್ತು ಕಾರ್ಯಗಳ ಮೂಲಕ ರಾಜ್ಯದ ಮತ್ತು ಜನತೆಯ ಏಳಿಗೆಯನ್ನು ಸಾಧಿಸಿ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಇದರಿಂದ ನಿರಾಶೆ ಹೊಂದಿರುವ ಪ್ರತಿಪಕ್ಷಗಳು ಹೆಚ್ಚು ಹೆಚ್ಚು ತೀವ್ರ ಗಲಭೆ ಎಬ್ಬಿಸುವ ದಾರಿ ಹಿಡಿದಿವೆ

"ನಾವು ಖಾಸಗಿ ಸಶಸ್ತ್ರ ಸ್ವಯಂಸೇವಕ ಸೇನೆಯನ್ನು ಸಂಘಟಿಸಬೇಕಾಗುವುದು" ಎಂದು ಪ್ರತಿಪಕ್ಷ ನಾಯಕ ಪಿ. ಟಿ. ಚಾಕೋ ಎಸೆಂಬ್ಲಿಯಲ್ಲಿ ಬಹಿರಂಗವಾಗಿ ಘೋಷಿಸಿರುವುದು, ಪೋಲೀಸರೂ ಅಧಿಕಾರಿಗಳೂ ಸರಕಾರದ ಆಜ್ಞೆಗಳನ್ನು ಪಾಲಿಸಬೇಕಾಗಿಲ್ಲವೆಂದು ಪನಂಬಳ್ಳಿ ಗೋವಿಂದ ಮೇನೋನ್ ಪ್ರಚೋದಿಸಿರುವುದು, ಆಯುಧ ಸಜ್ಜಿತರಾದ 'ಕ್ರಿಸ್ಟೋಫರ್' ಪಡೆಯನ್ನು ಕೆಥೋಲಿಕ್ ಪಾದ್ರಿಗಳು ಸಂಘಟಿಸುತ್ತಿರುವುದು — ಇದೆಲ್ಲ ಉದ್ದೇಶಪೂರ್ವಕವಾದ ಒಂದೇ ಒಂದು ಕಾರ್ಯಕ್ರಮದ ಭಾಗಗಳಾಗಿವೆ. ಘಟನಾತ್ಮಕವಾಗಿ ಅಧಿಕಾರಕ್ಕೆ ಬಂದಿರುವ ಮತ್ತು ಘಟನೆಗೆ ಒಳಪಟ್ಟು—ಅತ್ಯಂತ ಪ್ರಜಾಪ್ರಭುತ್ವ ರೀತಿಯಲ್ಲಿ—ನಡೆಯುತ್ತಿರುವ ಸರಕಾರವನ್ನು ಬಲಾತ್ಕಾರದಿಂದ ಉರುಳಿಸುವ ಕಾರ್ಯಕ್ರಮಕ್ಕೆ ಕೇರಳ ಕಾಂಗ್ರೆಸ್ಸು ನಾಯಕತ್ವ ವಹಿಸುತ್ತಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ದುರಂತ ಘಟನೆಗಳು

ಇತ್ತೀಚಿಗೆ ನಡೆದಿರುವ ಗಲಭೆಗಳು. ಘರ್ಷಣೆಗಳು ಮತ್ತು ಗೋಳಿಬಾರನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ವಿದ್ಯಾರ್ಥಿಗಳ ಹೋರಾಟದ ನೆಪದಲ್ಲಿ ಮಕ್ಕಳ ಮೇಲೂ ಹೆತ್ತವರ ಮೇಲೂ ಹಲ್ಲೇ ನಡೆದಿದೆ. ಸರಕಾರೀ ದೋಣಿಗಳನ್ನು ಬಸ್ಸುಗಳನ್ನು ಕಲ್ಲುಹೊಡೆದು ಒಡೆದು ಹಾಕುವುದು ಸರ್ವಸಾಧಾರಣವಾಗಿದೆ. ಸರಕಾರೀ ಕಛೇರಿಗಳಲ್ಲಿ ಕೆಲಸಕ್ಕೆ ಆತಂಕ ಮಾಡುವುದು, ಪೋಲೀಸರ ಮೇಲೆ ಹಲ್ಲೆ ನಡೆಸುವುದು ಹಬ್ಬಿದೆ. ವಿದ್ಯಾರ್ಥಿಗಳ ಕೇಳಿಕೆಯೆಂದು ಈ ಹೋರಾಟಗಾರರು ಮುಂದಿಟ್ಟಿರುವ ಕೇಳಿಕೆಯಲ್ಲಿ ಏನೂ ಹುರುಳಿಲ್ಲವಾದರೂ, ಅದನ್ನು ವಿಚಾರಿಸಿ ಪರಿಹಾರ ನೀಡುವುದಾಗಿ ಸರಕಾರ ಭರವಸೆ ನೀಡಿದೆ. ಆದರೆ ಈ ಹೋರಾಟಗಾರರಿಗೆ ಬೇಕಾಗಿರುವುದು ಪರಿಹಾರವಲ್ಲ, ಸರಕಾರವನ್ನು ಉರುಳಿಸಬಲ್ಲ ಗಲಭೆಯೇ ಅವರಿಗೆ ಬೇಕಾಗಿರುವುದು.

ಇಂಥ ಪ್ರಕ್ಷುಬ್ಧ ವಾತಾವರಣದಲ್ಲಿ ತ್ರಿಚೂರಿನ ಬಳಿಯ ಒಂದು ಹಳ್ಳಿಯಲ್ಲಿ ವಿರುದ್ಧ ಪಕ್ಷಗಳ ಬೆಂಬಲಿಗರೊಳಗೆ ಘರ್ಷಣೆ ನಡೆದು ಐದು ಮಂದಿಯ ಮರಣವಾದ ದುರಂತ ಘಟನೆ ನಡೆಯಿತು. ಇದು ನಿಜಕ್ಕೂ ವಿಷಾದಕರ.

ಅದೇ ಸಮಯದಲ್ಲಿ ಕೊಯಿಲೊನ್‌ನಲ್ಲಿ ಗೋಡಂಬಿ ಕಾರ್ಖಾನೆಯೊಂದರ ಕೆಲಸಗಾರರ ಮೇಲೆ ಗೋಳಿಬಾರು ನಡೆದು ಇಬ್ಬರು ಸತ್ತರು, ಆರು ಜನಕ್ಕೆ ಗಾಯಗಳಾದುವು. ಎಂಥ ಗಂಭೀರ ಪರಿಸ್ಥಿತಿಯಲ್ಲೂ ಗೋಳಿಬಾರು ಮಾಡದೆ ಇರಬೇಕೆಂಬ ಉದ್ದೇಶದಿಂದ ಈತನಕ ಅನೇಕ ಬಿಕ್ಕಟ್ಟುಗಳನ್ನು ಯಶಸ್ವಿಯಾಗಿ ನಿವಾರಿಸಿರುವ ಸರಕಾರದ ಕೈಕೆಳಗೆ ಈ ಘಟನೆ ನಡೆದುದು ವಿಷಾದಕರವಾಗಿದೆ. ಗೋಳಿಬಾರು ನಡೆದುದಕ್ಕೆ ವಿಷಾದ ವ್ಯಕ್ತಪಡಿಸಿ, ಕೂಲಂಕುಷ ವಿಚಾರಣೆ ನಡೆಸುವುದಾಗಿ ಮುಖ್ಯ ಮಂತ್ರಿ ನಂಬೂದ್ರಿಪಾದ್ ಹೇಳಿಕೆಯಿತ್ತಿದ್ದಾರೆ. ಮಡಿದವರ ಕುಟುಂಬಗಳಿಗೆ ಪರಿಹಾರಕೊಡಲು ಸರಕಾರ ತೀರ್ಮಾನಿಸಿದೆ.

ಮುಖ್ಯ ಮಂತ್ರಿಗಳ ವಿನಂತಿ

ಇ. ಎಂ. ಎಸ್. ನಂಬೂದ್ರಿಪಾದ್‌ರವರು ಒಂದು ಹೇಳಿಕೆ ಹೊರಡಿಸಿ, ರಾಜ್ಯದಲ್ಲಿ ಶಾಂತಿ ಸಂರಕ್ಷಿಸುವ ಕಾರ್ಯದಲ್ಲಿ ಸಹಕರಿಸಬೇಕೆಂದು ಎಲ್ಲ ಪಕ್ಷಗಳನ್ನು ಕೇಳಿಕೊಂಡಿದ್ದಾರೆ. ಇಂದು ನಡೆಯುತ್ತಿರುವ ಹೋರಾಟಗಳು, ಅವುಗಳ ಕಾರಣ, ಹೋರಾಟಗಾರರು ಅನುಸರಿಸುತ್ತಿರುವ ಕ್ರಮಗಳು ಮತ್ತು ಅವುಗಳೊಂದಿಗೆನೇ ಸರಕಾರ ವಹಿಸಿರುವ ಕಾಯಿದೆ ಹಾಗು ನೆಮ್ಮದಿ ರಕ್ಷಣೆಯ ಕ್ರಮಗಳನ್ನೆಲ್ಲ ನಿಷ್ಪಕ್ಷಪಾತವಾಗಿ ವಿಚಾರಣೆಗೆ ಒಪ್ಪಿಸುವುದಕ್ಕೆ ತಾನು ಸಿದ್ಧನಿದ್ದೇನೆಂದು ನಂಬೂದ್ರಿಪಾದ್ ಹೇಳಿದ್ದಾರೆ. ಅದೇ ಸಮಯದಲ್ಲಿ ಪ್ರತಿಪಕ್ಷಗಳು ತಮ್ಮ ಅನುಯಾಯಿಗಳು ಹಿಂಸಾ ಮಾರ್ಗ ಅನುಸರಿಸಬಾರದೆಂದು ಕೇಳಿಕೊಳ್ಳಬೇಕೆಂದು ವಿನಂತಿಸಿದ್ದಾರೆ.

ಕೇರಳದಲ್ಲಿ ಅಧಿಕಾರ ಕಳೆದುಕೊಂಡಿರುವ ಮತ್ತು ಈಗ ಹೆಚ್ಚು ಹೆಚ್ಚು ಜನರ ಬೆಂಬಲವನ್ನು ಕಳೆದುಕೊಳ್ಳುತ್ತಿರುವ ಪ್ರತಿಪಕ್ಷಗಳಿಗೆ ಇರುವುದು ಒಂದೇ ಒಂದು ಆಶೆ—ಕೇಂದ್ರ ಸರಕಾರ ಕೈ ಹಾಕಿ ಅಧ್ಯಕ್ಷರ ಆಳ್ವಿಕೆ ಸ್ಥಾಪಿಸುವ ಆಶೆ. ವಿದ್ಯಾಭ್ಯಾಸ ಮಸೂದೆ ತಿದ್ದುಪಡಿಯಾಗಿ ಮಂಜೂರಾಗಲಿದೆ, ಭೂಸುಧಾರಣೆಯ ಮಸೂದೆ ಮಂಜೂರಾಗಲಿದೆ. ಆದಾಗುವ ಮೊದಲೇ ಈ ಸರಕಾರವನ್ನು ಕಿತ್ತು ಹಾಕಬೇಕು ಎನ್ನುವುದೇ ಅವರ ಉದ್ದೇಶ.

ಈ ದುರುದ್ದೇಶ ಈಡೇರಲಾರದು. ಕೇರಳದ ಎಚ್ಚತ್ತ ಜನತೆ ಮತ್ತು ಭಾರತದ ಪುರೋಗಾಮಿ ಶಕ್ತಿಗಳು ಕೇರಳ ಸರಕಾರದ ಬೆಂಬಲಕ್ಕೆ ಇವೆ ಎಂದು ಅವರು ನೆನಪಿಡಲಿ. ಕೇರಳ ರಾಜಕೀಯರಂಗದ ವಾಸ್ತವಾಂಶಗಳನ್ನು ತಿಳಿದುಕೊಂಡು ಸರಕಾರಕ್ಕೆ ಬೆಂಬಲ ನೀಡಬೇಕೆಂದು ಎಲ್ಲ ಪ್ರಜಾಪ್ರಭುತ್ವವಾದಿಗಳಲ್ಲೂ ವಿನಂತಿ ಮಾಡುತ್ತೇವೆ.

ಪೋಲೀಸರ ಅತ್ಯಾಚಾರದ ವಿರುದ್ಧ ಪ್ರತಿಭಟನಾ ಮುಷ್ಕರ

ಬೆಂಗಳೂರಿನ ಟ್ಯಾಕ್ಸಿ ಮತ್ತು ಆಟೋರಿಕ್ಷ ಚಾಲಕರು ಇಂದು (31—7—58) ಪೋಲೀಸರು ವಿನಾಕಾರಣ ಡ್ರೈವರುಗಳನ್ನು ಹೊಡೆದುದರ ವಿರುದ್ಧ ಪ್ರತಿಭಟಿಸಲು ಮುಷ್ಕರ ನಡೆಸಿದರು. ಎಲ್ಲ ಟ್ಯಾಕ್ಸಿ ಮತ್ತು ರಿಕ್ಷಾಗಳು ಮೆರವಣಿಗೆಯಲ್ಲಿ ಪೋಲೀಸರ ದಬ್ಬಾಳಿಕೆ ವಿರುದ್ಧ ಘೋಷಣೆ ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ, ಪೋಲೀಸು ಅಧಿಕಾರಿಗಳನ್ನು ಭೆಟ್ಟಿಯಾದರು. ನಗರದ ಡಿ. ಎಸ್. ಪಿ. ಯವರಿಗೆ ಮನವಿಯನ್ನರ್ಪಿಸಿದರು. ಅಧಿಕಾರಿಗಳು ಕೂಡಲೇ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುವ ಭರವಸೆಯಿತ್ತ ನಂತರ ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

ವಾರದ ವಾರ್ತಾ ಸಮೀಕ್ಷೆ

(೩ನೇ ಪುಟದಿಂದ)

ಲೆಬನಾನ್ ಅಧ್ಯಕ್ಷ ಚುನಾವಣೆ

ಲೆಬನಾನಿನಲ್ಲಿ ಅಮೇರಿಕದ ಸೇನೆಗಳು ಬಂದಿಳಿದನಂತರ ಮುಂದೆ ಹಾಕಲ್ಪಟ್ಟ ಲೆಬನಾನ್ ರಾಷ್ಟ್ರಾಧ್ಯಕ್ಷರ ಚುನಾವಣೆಯು ಜುಲೈ 31ರಂದು ನಡೆಯಬೇಕಿದೆ. ಲೆಬನಾನಿನ ಸಂಯುಕ್ತ ವಿರೋಧ ಪಕ್ಷವು ಅಮೇರಿಕದ ಪಡೆಗಳು ಲೆಬನಾನಿನಿಂದ ಕಾಲ್ತೆಗೆಯುವವರೆಗೆ ತಾವು ಚುನಾವಣೆಯಲ್ಲಿ ಭಾಗವಹಿಸುವುದಿಲ್ಲವೆಂದು ಘೋಷಿಸಿವೆ. ಪ್ರಸಕ್ತ ಅಧ್ಯಕ್ಷ ಷಾಮೂನ್‌ರವರ ವಿರೋಧವಾಗಿ ಹೋರಾಟ ನಡೆಸುತ್ತಿರುವ ತಂಡದ ನಾಯಕರು, ತಮ್ಮ ಇಚ್ಛೆಗೆ ವಿರೋಧವಾಗಿ ಹೋರಾಟ ನಡೆಸಿದಂತೆಯೇ ಹೋರಾಟ ಮುಂದುವರಿಸುವುದಾಗಿ ತಿಳಿಸಿದ್ದಾರೆ.

ಅಧ್ಯಕ್ಷ ಐಸನ್ ಹೋವರರ ವಿಶೇಷ ಪ್ರತಿನಿಧಿ ಅಧ್ಯಕ್ಷರ ಚುನಾವಣೆಯಲ್ಲಿ ತಲೆಹಾಕಿದ್ದಾರೆ. ವಿರೋಧ ಪಕ್ಷಗಳ ನಾಯಕರೊಂದಿಗೆ ಸಮಾಲೋಚನೆ ನಡೆಸಿ ತಮಗೆ ಅನುಕೂಲವಾಗಿರುವಂಥವರನ್ನು ಅಧಿಕಾರಕ್ಕೆ ತರಲು ಯತ್ನಿಸುತ್ತಿದ್ದಾರೆ. ಮತ್ತೊಂದು ದೇಶದ ರಾಜಕೀಯದಲ್ಲಿ ಆ ದೇಶದ ಸ್ವಾತಂತ್ರವನ್ನು ಕಬಳಿಸಲು ಸೇನೆ ತಂದಿರಿಸುವುದೇ ಅಲ್ಲದೆ, ವ್ಯವಹಾರದಲ್ಲೂ ತಲೆಹಾಕುವುದು ಅಮೇರಿಕದ ನೀತಿಯಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಮೆರಿಕದ ಈ ನೀತಿಯನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ವಿರೋಧ ಪಕ್ಷಗಳ ನಿಲುವು ಸರಿಯಾದುದಾಗಿದೆ. ಈ ಮಧ್ಯೆ ಅಧ್ಯಕ್ಷ ಸ್ಥಾನಕ್ಕೆ ಹಲವಾರು ಸ್ಪರ್ಧಿಗಳು ತಮ್ಮ ನಾಮಕರಣ ಪತ್ರ ಸಲ್ಲಿಸಿದ್ದಾರೆ.

ಲೆಬನಾನ್ ಇಂದು ವಸ್ತುಶಃ ಅಮೇರಿಕದ ಆಕ್ರಮಣದಲ್ಲಿರುವುದರಿಂದ ಚುನಾವಣೆ ಒಂದು ಸಮಯ ನಡೆದರೂ ಅದು ನಿಜವಾಗಿ ಸ್ವತಂತ್ರವಾದ ಚುನಾವಣೆಯಾಗಲಿಕ್ಕಿಲ್ಲ.

ಶೃಂಗ ಸಭೆ ಮುಂದೂಡಲು ಯತ್ನ

ಮಧ್ಯಪ್ರಾಚ್ಯದಲ್ಲಿ ಉದ್ಭವಿಸಿರುವ ಪರಿಸ್ಥಿತಿಯನ್ನು ಕುರಿತು ಸಮಾಲೋಚನೆ ನಡೆಸಲು ಶೃಂಗ ಸಮ್ಮೇಳನ ನಡೆಯಬೇಕೆಂದು ಸೋವಿಯತ್ ಪ್ರಧಾನಿ ಕೃಶ್ಚೇವ್‌ರವರ ಸಲಹೆಯನ್ನು ಒಪ್ಪಿಕೊಂಡಿದ್ದರೂ ಪಶ್ಚಿಮ ರಾಷ್ಟ್ರಗಳು ಅದನ್ನು ಮುಂದೂಡಲು ಯತ್ನಿಸುತ್ತಿವೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಡಿಯಲ್ಲಿ ಶೃಂಗಸಮ್ಮೇಳನ ನಡೆಯಬೇಕೆಂದು ಬ್ರಿಟನ್ನಿನ ಸಲಹೆಯನ್ನು ರಷ್ಯ ಒಪ್ಪಿಕೊಂಡಿದ್ದರೂ, ಇಂದು ಅಮೇರಿಕದ ಒತ್ತಾಯದಿಂದ ತನ್ನ ನಿಲುಮೆಯಿಂದ ಹಿಂದೆ ಸರಿಯುತ್ತಿದೆ.

ಸೋವಿಯತ್ ಪ್ರಧಾನಿ ನಿಕಿಟಾ ಕೃಶ್ಚೇವ್‌ರವರು ಬ್ರಿಟನ್, ಅಮೇರಿಕಗಳ ಈ ಮುಂದೂಡುವ ಹಂಚಿಕೆಯನ್ನು ಟೀಕಿಸಿದ್ದಾರೆ. ರಷ್ಯವು ನ್ಯೂಯಾರ್ಕಿನಲ್ಲಿ ಅಲ್ಲದಿದ್ದರೆ ಶೃಂಗ ಸಭೆಗೆ ಯೂರೋಪಿನ ಯಾವ ರಾಷ್ಟ್ರದಲ್ಲಾದರೂ ಸರಿ ಅದರಲ್ಲಿ ಭಾಗವಹಿಸಲು ಸಿದ್ಧವಿದೆಯೆಂದು ಕೃಶ್ಚೇವ್ ಘೋಷಿಸಿದ್ದಾರೆ.

ವಿಶ್ವದ ಜನತೆಯ ಅಭಿಪ್ರಾಯಗಳಿಗೆ ವಿರೋಧವಾಗಿ ಅದನ್ನು ಕ್ಷುಲ್ಲಕವಾಗಿ ಪರಿಗಣಿಸಿ, ಅಮೆರಿಕ, ಬ್ರಿಟನ್‌ಗಳು ತಮ್ಮ ಯುದ್ಧಕೋರ ನೀತಿಯನ್ನು ಮುಂದುವರಿಸುತ್ತಿವೆ.

ವಿಶ್ವದ ಶಾಂತಿಪ್ರಿಯ ಜನರೆಲ್ಲರೂ ಶೃಂಗ ಸಮಾವೇಶ ಕೂಡಲೇ ಜರಗಬೇಕೆಂದು ಒತ್ತಾಯವನ್ನು ಮತ್ತಷ್ಟು ಪ್ರಬಲವಾಗಿ ತರಬೇಕಾಗಿದೆ. "ರಮೇಶ"

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone: 3810